# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಸೋಮವಾರ, ಏಪ್ರಿಲ್ 14, 2025

ಸಂಪುಟ : 51 ಸಂಚಿಕೆ : 330 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ನಗರಕ್ಕೆ ಆಗಮಿಸಿದ ಶಿರಡಿ ಸಾಯಿಬಾಬಾ ಪಾದುಕೆಗಳು, ಮೆರವಣಿಗೆ

ದಾವಣಗೆರೆ, ಏ.13- ಶಿರಡಿ ಸಾಯಿಬಾಬಾ ಅವರು ತಮ್ಮ ಜೀವಿತಾವಧಿಯಲ್ಲಿ ಧರಿಸುತ್ತಿದ್ದ ಪಾದುಕೆಗಳು ಸುವರ್ಣ ರಥದಲ್ಲಿ ಭಾನುವಾರ ಸಂಜೆ ನಗರಕ್ಕೆ ಆಗಮಿಸಿದವು. ಜಯದೇವ ವೃತ್ತದಿಂದ ಜನಪದ ಕಲಾ ತಂಡಗಳೊಂದಿಗೆ ಭವ್ಯ ಮೆರವಣಿಗೆ ಮೂಲಕ ಪಾದುಕೆಗಳನ್ನು ನಗರದ ಎಂ.ಸಿ.ಸಿ.'ಎ' ಬ್ಲಾಕ್‌ನ ಶ್ರೀ ಶಿರಡಿ ಸಾಯಿಬಾಬಾ ಮಂದಿರಕ್ಕೆ ಕೊಂಡೊಯ್ಯಲಾಯಿತು. ನಾಳೆ ದಿನಾಂಕ 14ರ ಸೋಮವಾರ, ದಿನಾಂಕ 15ರ ಮಂಗಳವಾರ ಬೆಳಿಗ್ಗೆ 8ರಿಂದ ರಾತ್ರಿ 10ರ ವರೆಗೂ ಪಾದುಕೆಗಳನ್ನು ಸಾರ್ವಜನಿಕರ ದರ್ಶನಕ್ಕಿಡಲಾಗುವುದು. ದರ್ಶನಕ್ಕೆ ಬಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಲಡ್ಡು ಪಾಕೆಟ್ ವಿತರಿಸಲಾಗುತ್ತದೆ.

# ಹೆದ್ದಾರಿಗಳ ಉನ್ನತೀಕರಣಕ್ಕೆ 10 ಲಕ್ಷ ಕೋಟಿ ರೂ.: ಗಡ್ಕರಿ

ನವದೆಹಲಿ, ಏ. 13 - ಮುಂದಿನ ಎರಡು ವರ್ಷಗಳಲ್ಲಿ ದೇಶಾದ್ಯಂತ ಇರುವ ರಾಷ್ಟ್ರೀಯ ಹೆದ್ದಾರಿಗಳನ್ನು ಉನ್ನತೀಕರಿಸಲು 10 ಲಕ್ಷ ಕೋಟಿ ರೂ.ಗಳ ಹೂಡಿಕೆಯ ಯೋಜನೆಯನ್ನು ರೂಪಿಸಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಖಾಸಗಿ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ ಅವರು, ದೇಶದ ಮೂಲಸೌಕರ್ಯವನ್ನು ಗಣನೀಯವಾಗಿ ಸುಧಾರಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಹೇಳಿದ್ದಾರೆ.

ಮುಂದಿನ ಎರಡು ವರ್ಷಗಳಲ್ಲಿ ಭಾರತದ ಹೆದ್ದಾರಿಗಳು ವಿಶ್ವದ ಅತ್ಯುನ್ನತ ರಸ್ತೆಗಳಿಗೆ ಸಮಾನವಾಗಿರಲಿವೆ. ಈಶಾನ್ಯ ರಾಜ್ಯಗಳು ಮತ್ತು ಗಡಿಪ್ರದೇಶಗಳ ಮೂಲಸೌಕರ್ಯ ವಿಸ್ತರಣೆಗೆ ವಿಶೇಷ ಒತ್ತು ನೀಡಲಾಗುವುದು ಎಂದು ಗಡ್ಕರಿ ಹೇಳಿದ್ದಾರೆ.

ಈಶಾನ್ಯ ರಾಜ್ಯಗಳು ಕಠಿಣ ಪ್ರದೇಶಗಳನ್ನು ಹೊಂದಿವೆ ಮತ್ತು ಗಡಿಗಳಿಗೆ ಸನಿಹವಾಗಿವೆ. ಈ ಪ್ರದೇಶಗಳಲ್ಲಿ ರಸ್ತೆ ಮೂಲಸೌಕರ್ಯವನ್ನು ಉನ್ನತೀಕರಿಸುವ ಅಗತ್ಯವಿದೆ. ಅಮೆರಿಕಾದ ರಸ್ತೆಗಳಿಗೆ ಹೋಲುವಂತೆ ಈಶಾನ್ಯದ ಹೆದ್ದಾರಿಗಳನ್ನು ಮುಂದಿನ ಎರಡು ವರ್ಷಗಳಲ್ಲಿ ರೂಪಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

### ದ್ವಿಪಥ ಹೆದ್ದಾರಿಗಳ ಪ್ರಮಾಣ ಶೇ.9ಕ್ಕೆ ಇಳಿಕೆ

**ದೇಶದಲ್ಲಿ ಹೆದ್ದಾರಿಗಳ ವಿಸ್ತರಣೆ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ. ದ್ವಿಪಥ ಹೆದ್ದಾರಿಗಳ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ ಎಂದು ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.**

**ಈ ಹಿಂದೆ ಕಿರಿದಾದ ಹೆದ್ದಾರಿಗಳ ಪ್ರಮಾಣ ಶೇ. 30ರಷ್ಟಿತ್ತು. ಇದೀಗ ಅದು ಕೇವಲ ಶೇ. 9ಕ್ಕೆ ಇಳಿದಿದೆ ಎಂದು ಅವರು ತಿಳಿಸಿದ್ದಾರೆ.**

ವಿಶ್ವದ ಅತ್ಯುನ್ನತ ಮಟ್ಟದ ಮೂಲ ಸೌಕರ್ಯವನ್ನು ಭಾರತಕ್ಕೆ ಒದಗಿಸುವುದು ಸರ್ಕಾರದ ಗುರಿಯಾಗಿದೆ. ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು, ರಾಜಸ್ಥಾನ, ದೆಹಲಿ ಸೇರಿದಂತೆ ಎಲ್ಲ ರಾಜ್ಯಗಳಲ್ಲಿ ಹೆದ್ದಾರಿಗಳ ಉನ್ನತೀಕರಣ ಕಾರ್ಯ ನಡೆಯುತ್ತಿದೆ ಎಂದು ಗಡ್ಕರಿ ಹೇಳಿದ್ದಾರೆ.

ಈಶಾನ್ಯ ರಾಜ್ಯಗಳಲ್ಲಿ 784 ಹೆದ್ದಾರಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. 3.73 ಲಕ್ಷ ಕೋಟಿ ರೂಪಾಯಿಗಳ ವೆಚ್ಚದಲ್ಲಿ 21,355 ಕಿಲೋಮೀಟರ್ ಉದ್ದದ (2ನೇ ಪುಟಕ್ಕೆ)

### ನಾಗಪುರದಲ್ಲಿ 135 ಸೀಟುಗಳ ಬಸ್ ಯೋಜನೆ

**ನಾಗಪುರದಲ್ಲಿ ವೇಗದ ಸಾರಿಗೆಗಾಗಿ 170 ಕೋಟಿ ರೂ.ಗಳ ವೆಚ್ಚದ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ ಎಂದು ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.**

**ಈ ಯೋಜನೆಯ ಭಾಗವಾಗಿ, 135 ಸೀಟುಗಳ ಸಾಮರ್ಥ್ಯದ ಬಸ್‌ಗಳನ್ನು ಪರಿಚಯಿಸಲಾಗುವುದು. ಈ ಬಸ್‌ಗಳು ಮಾಲಿನ್ಯರಹಿತ ಇಂಧನವನ್ನು ಬಳಸುವುದರ ಜೊತೆಗೆ ಉನ್ನತ ಇಂಧನ ದಕ್ಷತೆಯನ್ನು ಹೊಂದಿರಲಿವೆ. ಈ ಯೋಜನೆ ಯಶಸ್ವಿಯಾದರೆ, ದೆಹಲಿ-ಜೈಪುರ ಮಾರ್ಗದಲ್ಲೂ ಇಂತಹ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಗಡ್ಕರಿ ತಿಳಿಸಿದ್ದಾರೆ.**

**2024-25ರ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು 5,150 ಕಿಲೋಮೀಟರ್ ಉದ್ದದ ಹೆದ್ದಾರಿ ನಿರ್ಮಿಸುವ ಗುರಿ ಹೊಂದಿತ್ತು. ಆದರೆ, ಈ ಗುರಿ ಮೀರಿ 5,614 ಕಿಲೋ ಮೀಟರ್ ಉದ್ದದ ಹೆದ್ದಾರಿಗಳನ್ನು ಪೂರ್ಣಗೊಳಿಸಲಾಗಿದೆ ಎಂದವರು ಹೇಳಿದ್ದಾರೆ.**

## ಉದ್ಯೋಗ ಖಾತ್ರಿ ಯೋಜನೆಗೆ ಸ್ವತಂತ್ರ ಸಮೀಕ್ಷೆಯ ಶಿಫಾರಸ್ಸು

ನವದೆಹಲಿ, ಏ. 13 - ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪರಿಣಾಮಕಾರಿತ್ವವನ್ನು ಅಳೆಯಲು ಸ್ವತಂತ್ರ ಸಮೀಕ್ಷೆ ನಡೆಸಬೇಕೆಂದು ಸಂಸದೀಯ ಸಮಿತಿಯು ಶಿಫಾರಸ್ಸು ಮಾಡಿದೆ.

ಕಾಂಗ್ರೆಸ್ ಸಂಸದ ಸಪ್ತಗಿರಿ ಶಂಕರ ಉಲಾಕ ಅವರ ನೇತೃತ್ವದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಕುರಿತು ಸಂಸದೀಯ ಸ್ಥಾಯಿ ಸಮಿತಿಯು ಈ ಕುರಿತ ವರದಿಯನ್ನು ಸಲ್ಲಿಸಿದ್ದು, ಕಳೆದ ವಾರ ಸಂಸತ್ತಿನಲ್ಲಿ ಮಂಡಿಸಲಾಗಿದೆ.

ಉದ್ಯೋಗ ಖಾತ್ರಿ ಯೋಜನೆಯ ದಿನಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಬೇಕು ಹಾಗೂ ಕನಿಷ್ಠ ಕೂಲಿಯನ್ನು ದಿನಕ್ಕೆ 400 ರೂ.ಗಳಿಗೆ ಏರಿಸಬೇಕೆಂದು ಶಿಫಾರಸ್ಸಿನಲ್ಲಿ ತಿಳಿಸಲಾಗಿದೆ.

ಯೋಜನೆಗೆ ನೀಡಲಾಗಿರುವ ಅನುದಾನ ಸಾಲುತ್ತಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಯೋಜನೆ ಸಮರ್ಪಕವಾಗಿ ಜಾರಿಯಾಗಲು ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಬೇಕು ಮತ್ತು ಯೋಜನೆಯ ಪರಿಣಾಮಕಾರಿತ್ವವನ್ನು



ತಿಳಿಯಲು ರಾಷ್ಟ್ರೀಯ ಮಟ್ಟದ ಸಮೀಕ್ಷೆ ನಡೆಸಬೇಕೆಂದು ಶಿಫಾರಸ್ಸು ಮಾಡಲಾಗಿದೆ.

ಕೆಲಸಗಾರರ ಸಂತೃಪ್ತಿ, ಕೂಲಿ ಪಾವತಿಯ ವಿಳಂಬ, ಜನರ ಪಾಲ್ಗೊಳ್ಳುವಿಕೆ ಹಾಗೂ ಹಣಕಾಸಿನ ಅವ್ಯವಹಾರಗಳ ಬಗ್ಗೆಯೂ ವಿಶೇಷ ಗಮನ ಹರಿಸಬೇಕೆಂದು ವರದಿಯಲ್ಲಿ ಸೂಚಿಸಲಾಗಿದೆ. ಉದ್ಯೋಗ ಖಾತ್ರಿಯ ವಾರ್ಷಿಕ ದಿನಗಳ ಸಂಖ್ಯೆಯನ್ನು 100 ರಿಂದ 150 ಕ್ಕೆ ಹೆಚ್ಚಿಸಬೇಕು. ಬರಗಾಲದ ಸಂದರ್ಭದಲ್ಲಿ ಕಲ್ಪಿಸುವ ಖಾತ್ರಿ ದಿನಗಳನ್ನು 150 ರಿಂದ 200 (2ನೇ ಪುಟಕ್ಕೆ)

## ಬ್ರಾಹ್ಮಣ ಮಹಾಸಭಾದ ಜಿಲ್ಲಾ ಪ್ರತಿನಿಧಿಯಾಗಿ ಆನಂದತೀರ್ಥಾಚಾರ್



ದಾವಣಗೆರೆ, ಏ.13- ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ದಾವಣಗೆರೆ ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಜಿಲ್ಲೆಯ ಹಿರಿಯ ಜ್ಯೋತಿಷಿಗಳೂ, ಅಭಿಯಂತರರೂ ಆದ ಸಿ.ಕೆ. ಆನಂದ ತೀರ್ಥಾಚಾರ್ ಅತ್ಯಧಿಕ ಮತಗಳನ್ನು ಗಳಿಸಿ ಆಯ್ಕೆಯಾಗಿದ್ದಾರೆ.

ಆನಂದತೀರ್ಥಾಚಾರ್ ಅವರು ತಮ್ಮ ಪ್ರತಿಸ್ಪರ್ಧಿ ಎನ್.ಆರ್. ನಾಗಭೂಷಣರಾವ್ ಅವರಿಗಿಂತ 216 ಮತಗಳನ್ನು ಹೆಚ್ಚು ಪಡೆದ ಚುನಾಯಿತಗೊಂಡಿದ್ದಾರೆ. ಆನಂದತೀರ್ಥಾಚಾರ್ 534 ಮತಗಳನ್ನು ಗಳಿಸಿ ಜಯ ಗಳಿಸಿದರೆ, ನಾಗಭೂಷಣರಾವ್ 318 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ.

ದಾವಣಗೆರೆ ಜಿಲ್ಲೆಯಲ್ಲಿ (5ನೇ ಪುಟಕ್ಕೆ)

# ವಸ್ತುನಿಷ್ಠ ಮರು ಗಣತಿ ನಡೆಸಲು ಆಗ್ರಹ

## ಸರ್ಕಾರಕ್ಕೆ ಶ್ರೀ ಶೈಲ ಪೀಠದ ಜಗದ್ಗುರು ಡಾ.ಚನ್ನಸಿದ್ಧರಾಮ ಸ್ವಾಮೀಜಿ ಮನವಿ

ದಾವಣಗೆರೆ, ಏ. 13- ಪ್ರತಿಶತ 50 ರಷ್ಟೂ ಅಭಿಪ್ರಾಯ ಸಂಗ್ರಹಣೆ ಮಾಡದೇ, ತರಾತುರಿಯಲ್ಲಿ ಜಾತಿ ಗಣತಿ ವರದಿ ಬಿಡುಗಡೆಗೆ ಸರ್ಕಾರ ಮುಂದಾಗಿರುವುದು ಸರಿಯಲ್ಲ. ಪುನರ್ ಪರಿಶೀಲಿಸಿ, ವಸ್ತುನಿಷ್ಠ ಮರು ಜಾತಿ ಗಣತಿ ವರದಿ ಬಿಡುಗಡೆ ಮಾಡುವಂತೆ ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರು ಸರ್ಕಾರಕ್ಕೆ ಆಗ್ರಹಿಸಿದರು.

ನಗರದ ಶ್ರೀಶೈಲ ಮಠದ (ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರ) ಆವರಣದಲ್ಲಿ ಶ್ರೀ ಗುರು ದೊಡ್ಡ ಬಸವೇಶ್ವರ ಸೇವಾ ಸಮಿತಿ ಪುಣ್ಯಕ್ಷೇತ್ರ ನಂದಿಪುರ-ದಾವಣಗೆರೆ ಇವರ ವತಿಯಿಂದ ಇಂದು ಸಂಜೆ ಹಮ್ಮಿಕೊಂಡಿದ್ದ ಶ್ರೀ ಗುರು ಚರಂತಪ್ಪಜ್ಜ ಮಹಾಸ್ವಾಮಿಗಳವರ 21 ನೇ ಸ್ಮರಣೋತ್ಸವ ಹಾಗೂ 'ಚರಂತಾರ್ಯ ಶ್ರೀ' ಪ್ರಶಸ್ತಿ ಪ್ರದಾನ, ಗ್ರಂಥ ಲೋಕಾರ್ಪಣೆ, ಉಚಿತ ಆರೋಗ್ಯ



**ಎಸ್ಸೆಸ್‌ಗೆ 'ಚರಂತಾರ್ಯ ಶ್ರೀ' ಪ್ರಶಸ್ತಿ ಪ್ರದಾನ**

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅವರಿಗೆ ನಂದಿಪುರ ಪುಣ್ಯಕ್ಷೇತ್ರದ ವತಿಯಿಂದ 'ಚರಂತಾರ್ಯ ಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ತಪಾಸಣೆ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸರಿಯಾದ ಕ್ರಮದಲ್ಲಿ ಸಮೀಕ್ಷೆ ನಡೆದಿಲ್ಲ. ಇದನ್ನು ನಾವು ಒಪ್ಪುವುದಿಲ್ಲ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಅವರು ನೀಡಿರುವ ಹೇಳಿಕೆಯನ್ನು ಸ್ವಾಗತಿಸುತ್ತೇವೆ ಮತ್ತು ಬೆಂಬಲಿಸುತ್ತೇವೆ. ಪ್ರಾಮಾಣಿಕವಾಗಿ, ಪೂರ್ವಾಗ್ರಹ ಪೀಡಿತರಾಗದೇ, ಎಲ್ಲರ ಅಭಿಪ್ರಾಯಗಳನ್ನು ಸಂಗ್ರಹಿಸಿ, ವಸ್ತು ನಿಷ್ಠ ಜಾತಿ ಜನಗಣತಿಗೆ ಸರ್ಕಾರ ಮುಂದಾಗಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿದರು.

ಸಮಾಜಕ್ಕೆ ಧಕ್ಕೆ ಉಂಟಾದಾಗ ಲೆಲ್ಲಾ ಸ್ವಹಿತ ಮರೆತು, ಪಕ್ಷವನ್ನು ಲೆಕ್ಕಿಸದೇ ಸಮಾಜದ ಹಿತಕ್ಕಾಗಿ ನಿಲ್ಲುವವರು ಶಾಸಕ ಡಾ. ಶಾಮನೂರು ಶಿವಶಂಕರಪ್ಪ. ತಮ್ಮದೇ ಸರ್ಕಾರವಿದ್ದರೂ ಜಾತಿ (2ನೇ ಪುಟಕ್ಕೆ)

## ಬ್ರಾಹ್ಮಣ ಸಂಘದ ಚುನಾವಣೆ : ನಾಡಿಗೇರ ಜಯ



ರಾಣೇಬೆನ್ನೂರು, ಏ.13- ಇಂದು ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಾವೇರಿ ಜಿಲ್ಲಾ ಪ್ರತಿನಿಧಿ ಚುನಾವಣೆಯ ಮತ ಎಣಿಕೆ ಮುಗಿದಿದ್ದು, ನಗರದ ತಾಲ್ಲೂಕು ಅಧ್ಯಕ್ಷ ದತ್ತಾತ್ರೇಯ ಸುಬ್ಬಣ್ಣ ನಾಡಿಗೇರ ಬಹುಮತ ಪಡೆದು ಆಯ್ಕೆಯಾದರು.

ದತ್ತಾತ್ರೇಯ ನಾಡಿಗೇರ ಅವರು 623 ಮತ ಪಡೆದರೆ, ಪ್ರತಿಸ್ಪರ್ಧಿ ಹೆಚ್ಚು ಪ್ರಚಾರದಲ್ಲಿದ್ದ ಡಾ. ಸಂಜಯ ನಾಯಕ್ ಅವರು 345 ಮತ ಪಡೆದು ಪರಾಭವಗೊಂಡರು. 25 ಮತಗಳು ತಿರಸ್ಕೃತಗೊಂಡಿವೆ ಎಂದು ಗೊತ್ತಾಗಿದೆ.

## ಪ್ರಚೋದನಕಾರಿ ಹೇಳಿಕೆ : ಕಬೀರ್ ಬಂಧನ

ದಾವಣಗೆರೆ, ಏ.12- ವಕ್ಫ್ ಮಸೂದೆ-2025 ಬಿಲ್ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಹರಿಬಿಟ್ಟಿದ್ದ ಆರೋಪಿ ಅಹಮ್ಮದ್ ನಗರದ ವಾಸಿ ಅಹಮ್ಮದ್ ಕಬೀರ್ ಖಾನ್‌ನನ್ನು ರಾಜಸ್ಥಾನದ ಅಜ್ಮೀರ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಕ್ಫ್ ಬಿಲ್ ವಿರುದ್ಧ ಪ್ರಚೋದನಕಾರಿಯಾಗಿ ಮಾತನಾಡಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. (5ನೇ ಪುಟಕ್ಕೆ)

## ಒಳಮೀಸಲಾತಿ ಬಳಿಕ ಸಂಭ್ರಮಿಸೋಣ



ಚಿತ್ರದುರ್ಗ, ಏ. 13 - ಒಳಮೀಸಲಾತಿ 30 ವರ್ಷಗಳ ಹೋರಾಟದ ಫಲ. ಆದರೆ, ಬಹಳಷ್ಟು ಗೊಂದಲ, ಕಾಣದ ಕೈಗಳ ಕಾರಣಕ್ಕೆ ವಿಳಂಬ ಆಗಿದೆ. ಈ ಮಧ್ಯೆ ಪರಿಶಿಷ್ಟ ಜಾತಿಗೆ ಸೀಮಿತಗೊಳಿಸಿ ಜಾತಿಗಣತಿ ಕಾರ್ಯ ಆರಂಭಗೊಂಡು, ಒಳಮೀಸಲಾತಿ ಜಾರಿಗೊಳ್ಳಲಿದೆ. ಅಲ್ಲಿಯವರೆಗೂ ನಾನು ಯಾವುದೇ ಹಬ್ಬ-ಹರಿದಿನ ಜೊತೆಗೆ ನನ್ನ ಜನ್ಮದಿನ ಕೂಡ ಆಚರಿಸುವುದಿಲ್ಲ ಎಂದು ಮಾಜಿ ಸಚಿವ ಎಚ್. ಆಂಜನೇಯ ತಿಳಿಸಿದ್ದಾರೆ.

ಭಾನುವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಏ.15, 2025ಕ್ಕೆ ನನಗೆ 70 ವರ್ಷ ತುಂಬಲಿದ್ದು, ಈ ದಿನವನ್ನು ಸ್ಮರಣೀಯಗೊಳಿಸಲು ಹಿತೈಷಿಗಳು, ಅಭಿಮಾನಿಗಳು, ಬೆಂಬಲಿಗರು ಬೆಂಗಳೂರಿನ ಅರಮನೆ ಮೈದಾನದ ಆವರಣದಲ್ಲಿನ ವಿಹಾರದಲ್ಲಿ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಂಡು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು (2ನೇ ಪುಟಕ್ಕೆ)

## ಪ್ರಕಾಶ್ ಏಕಬೋಟೆ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 6ನೇ ಮುಖ್ಯರಸ್ತೆ, ಸ್ವಿಮ್ಮಿಂಗ್ ಪೂಲ್ ಹತ್ತಿರದ ವಾಸಿ, ದಿ|| ಲಕ್ಷ್ಮಣ್‌ರಾವ್ ಏಕಬೋಟೆ ಇವರ ಪುತ್ರ ಹಾಗೂ ಪ್ರಕಾಶ್ ಏಜೆನ್ಸೀಸ್ ಮತ್ತು ವೆಂಕಟೇಶ್ ಟ್ರೇಡಿಂಗ್ ಕಂಪನಿ (ಭಂಡಾರಿ) ಪಾಲುದಾರರಾದ

**ಶ್ರೀ ಪ್ರಕಾಶ್ ಏಕಬೋಟೆ** ಅವರು

ದಿನಾಂಕ 12-04-2025ರ ಶನಿವಾರ ರಾತ್ರಿ 8.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಪ್ರಕಾಶ್ ಅವರ ಪಾರ್ಥಿವ ಶರೀರವನ್ನು ದಿನಾಂಕ 14-04-2025ರ ಸೋಮವಾರ ಮಧ್ಯಾಹ್ನ 11 ಗಂಟೆಯವರೆಗೆ ದಾವಣಗೆರೆಯ ಎಂ.ಸಿ.ಸಿ. 'ಬಿ' ಬ್ಲಾಕ್, 6ನೇ ಮುಖ್ಯರಸ್ತೆ, ಸ್ವಿಮ್ಮಿಂಗ್ ಪೂಲ್ ಹತ್ತಿರದ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ಮಧ್ಯಾಹ್ನ 1 ಕ್ಕೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ, ಮೊ. : 97317 05696, 94487 05480


SMT. PUSHPA SHAMANUR MAHALINGAPPA RESIDENTIAL CBSE, ICSE SCHOOL & PU SCIENCE COLLEGE, DAVANGERE

#5335, 1st Main, Road, Near Bapuji Engineering College, Swamy Vivekananda Badavane, Davangere, Karnataka.

REQUIRED TEACHERS

We invite well qualified & experienced teachers for our CBSE & ICSE Schools

WALK IN INTERVIEW

Date : 14-04-2025 & 15-04-2025

Timing : 10am to 4pm

SCIENCE, MATHS, SOCIAL & ENGLISH

| CLASS | SALARY |
|---|---|
| 1st - 4th Std. | Upto 40K |
| 5th - 8th Std. | Upto 50K |
| 9th - 10th Std. | Upto 65K |

LECTURERS FOR PUC & KCET
• PHYSICS • CHEMISTRY
• MATHEMATICS
• BIOLOGY

Co-ordinators: for Primary, Middle School & High School.

Front Office Manager

→ Physical Education Trainer (Male & Female Candidates)

For Enquiry Call: 9686266990

# ಬೇಸಿಗೆ ರಜೆ: ನಗರದಲ್ಲಿ ಕ್ರಿಕೆಟ್ ತರಬೇತಿ ಶಿಬಿರ ಆರಂಭ



ದಾವಣಗೆರೆ, ಏ. 13- ಬೆಂಗಳೂರಿಗೆ ತೆರಳಿ ಕ್ರಿಕೆಟ್ ತರಬೇತಿ ಪಡೆಯುವುದು ಎಲ್ಲರಿಗೂ ಸಾಧ್ಯವಿಲ್ಲ. ದಾವಣಗೆರೆ ಕ್ರಿಕೆಟ್ ಅಕಾಡೆಮಿ ಕಳೆದ 24 ವರ್ಷಗಳಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ನಿರಂತರವಾಗಿ ಉತ್ತಮ ತರಬೇತಿಯನ್ನು ನೀಡುತ್ತಿದೆ. ಯುವ ಪ್ರತಿಭಾವಂತರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಕರೆ ನೀಡಿದ್ದಾರೆ.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ದಾವಣಗೆರೆ ಕ್ರಿಕೆಟ್ ಅಕಾಡೆಮಿ ವತಿಯಿಂದ ಹಮ್ಮಿಕೊಂಡಿರುವ ಬೇಸಿಗೆ ಕ್ರಿಕೆಟ್ ಕೋಚಿಂಗ್ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬೆಂಗಳೂರಿನಲ್ಲಿ ಹೋಟೆಲ್‌ನಲ್ಲಿ ತಂಗಿ ತರಬೇತಿ ಪಡೆಯುವುದು ಸವಾಲಿನ ಸಂಗತಿ. ಆದರೆ ಇಲ್ಲಿಯೇ ಉತ್ತಮ ವ್ಯವಸ್ಥೆ ಇರುವುದರಿಂದ ಸ್ಥಳೀಯ ಮಟ್ಟದಲ್ಲಿ ಅವಕಾಶಗಳನ್ನು ಬಳಸಿಕೊಳ್ಳುವುದು ಉತ್ತಮ ಎಂದರು.

ಉತ್ತಮ ಆಟಗಾರರಿಗೆ ಅವಕಾಶ ದೊರಕುತ್ತದೆ. ತಮ್ಮಲ್ಲಿರುವ ಪ್ರತಿಭೆಯನ್ನು ಅರಿತು, ತರಬೇತುದಾರರ ಮಾರ್ಗದರ್ಶನವನ್ನು ಅನುಸರಿಸಿ ತಾವೇ ತಾವಾಗಿ ಉತ್ತಮ ಕ್ರಿಕೆಟರ್‌ಗಳಾಗಬೇಕು" ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕ್ರಿಕೆಟ್ ತರಬೇತುದಾರ ರಾದ ತಿಮ್ಮೇಶ್, ಗೋಪಾಲ ಕೃಷ್ಣ, ಮಂಜುನಾಥ್ ರೊಳ್ಳಿ, ತಿಪ್ಪೇಶ್, ಉಮೇಶ್ ಮತ್ತು ಬಾಲಣ್ಣ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ತುಮಕೂರು ವಲಯದಿಂದ 14 ವರ್ಷ ವಯೋಮಿತಿಯಲ್ಲಿ ರಾಜ್ಯಮಟ್ಟವನ್ನು ಪ್ರತಿನಿಧಿಸಿ ಒಟ್ಟು 6 ಶತಕಗಳ ಸಾಧನೆ ಮಾಡಿದ ಆರ್. ಶಿವರಾಜ್ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಕ್ರಿಕೆಟ್ ತರಬೇತಿಯು ಮೇ 31 ರವರೆಗೆ ನಡೆಯಲಿದ್ದು, ಆಸಕ್ತರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ವಿವರಕ್ಕೆ ಕೋಚ್ ಗೋಪಾಲಕೃಷ್ಣ (7899610318) ಅವರನ್ನು ಸಂಪರ್ಕಿಸಬಹುದು.

## 10 ಲಕ್ಷ ಕೋಟಿ ರೂ. : ನಿತಿನ್ ಗಡ್ಕರಿ

(1ನೇ ಪುಟದಿಂದ) ಹೆದ್ದಾರಿಗಳನ್ನು ನಿರ್ಮಿಸಲಾಗುವುದು ಎಂದವರು ತಿಳಿಸಿದರು. ಇದರಲ್ಲಿ ಅಸ್ಸಾಂನಲ್ಲಿ 57,696 ಕೋಟಿ ರೂ.ಗಳ ಯೋಜನೆ, ಬಿಹಾರದಲ್ಲಿ 90,000 ಕೋಟಿ, ಪಶ್ಚಿಮ ಬಂಗಾಳದಲ್ಲಿ 42,000 ಕೋಟಿ ರೂ., ಜಾರ್ಖಂಡ್‌ನಲ್ಲಿ 53,000 ಕೋಟಿ ರೂ. ಮತ್ತು ಒಡಿಶಾದಲ್ಲಿ 58,000 ಕೋಟಿ ರೂ.ಗಳ ಯೋಜನೆಗಳು ಜಾರಿಗೊಳ್ಳುತ್ತಿವೆ. ಅಸ್ಸಾಂ ಹೊರತು ಪಡಿಸಿ ಈಶಾನ್ಯ ರಾಜ್ಯಗಳಲ್ಲಿ ಈ ವರ್ಷದೊಳಗೆ 1 ಲಕ್ಷ ಕೋಟಿ ರೂ.ಗಳ ಯೋಜನೆಗಳು ಆರಂಭವಾಗಲಿವೆ ಎಂದು ಸಚಿವರು ತಿಳಿಸಿದ್ದಾರೆ.

# ಹುಬ್ಬಳ್ಳಿ : 5 ವರ್ಷದ ಬಾಲಕಿ ಹತ್ಯೆ

## ಬಿಹಾರ ಮೂಲದ ಆರೋಪಿ ಗುಂಡಿಗೆ ಬಲಿ

ಹುಬ್ಬಳ್ಳಿ, ಏ. 13 - ಇಲ್ಲಿನ ಅಶೋಕ ನಗರದಲ್ಲಿ ಐದು ವರ್ಷದ ಬಾಲಕಿಯನ್ನು ಅಪಹರಿಸಿ, ಕೊಲೆ ಮಾಡಿದ್ದ ಬಿಹಾರ ಮೂಲದ ಆರೋಪಿ ಪೊಲೀಸರ ಗುಂಡಿಗೆ ಬಲಿಯಾಗಿದ್ದಾನೆ.

ಬಾಲಕಿಯ ಪೋಷಕರು ಕೊಪ್ಪಳ ಮೂಲದವರಾಗಿದ್ದು, ಪೇಂಟಿಂಗ್ ಕೆಲಸಕ್ಕಾಗಿ ಹುಬ್ಬಳ್ಳಿಗೆ ಬಂದಿದ್ದರು. ಬಾಲಕಿಯ ತಂದೆ ಕೆಲಸಕ್ಕೆ ತೆರಳಿದ್ದರು ಹಾಗೂ ಬಾಲಕಿಯ ತಾಯಿ ಮನೆಯೊಳಗೆ ಕೆಲಸದಲ್ಲಿ ನಿರತರಾಗಿದ್ದರು. ಆಗ ಮಗು ಹೊರಗೆ ಆಟವಾಡುತ್ತಿತ್ತು.

ಈ ಸಂದರ್ಭವನ್ನು ಗಮನಿಸಿದ ಆರೋಪಿ ರಿತೇಶ್ ಕುಮಾರ್, ಬಾಲಕಿಯನ್ನು ಅಪಹರಿಸಿದ್ದಾನೆ. ಆರೋಪಿಯ ಚಲನವಲನಗಳು ಸಿಸಿಟಿವಿಯಲ್ಲಿ ಸೆರೆಯಾಗಿದ್ದವು. ಮಗಳು ಕಾಣೆಯಾಗಿರುವುದನ್ನು ತಿಳಿದ ತಾಯಿ, ಸ್ಥಳೀಯರೊಂದಿಗೆ ಸೇರಿ ಹುಡುಕಲು ಆರಂಭಿಸಿದ್ದರು. ಆದರೆ, ನಿರ್ಮಾಣ ಹಂತದ ಕಟ್ಟಡದ ಬಳಕೆಯಾಗದ ಶೌಚಾಲಯದಲ್ಲಿ ಬಾಲಕಿಯ ಶವ ಪತ್ತೆಯಾಗಿತ್ತು.

ಈ ಬಗ್ಗೆ ಮಾತನಾಡಿರುವ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್, ಬೆಳಿಗ್ಗೆ ಐದು ವರ್ಷದ ಮಗುವನ್ನು ಅಪಹರಿಸಿದ ಬಗ್ಗೆ ದೂರು ದಾಖಲಾಗಿತ್ತು. ನಂತರ ಅಪಹರಣ ನಡೆದ ಸ್ಥಳದ ಎದುರಿನ ಶೆಡ್‌ನಲ್ಲಿ ಮಗುವಿನ ಮೃತದೇಹ ದೊರೆತಿದೆ. ಬಾಲಕಿಯನ್ನು ಅಪಹರಿಸಿದ, ಅನುಚಿತವಾಗಿ ವರ್ತಿಸಿದ ಹಾಗೂ ಹತ್ಯೆ ಮಾಡಿದ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದರು.

ಸಿಸಿಟಿವಿ ದೃಶ್ಯ ಆಧರಿಸಿ ಆರೋಪಿಯನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು. ತನ್ನ ಹೆಸರು ರಿತೇಶ್ ಕುಮಾರ್ ಎಂದು ಆತ ತಿಳಿಸಿದ್ದ. ತಾನು ಬಿಹಾರದ ಪಾಟ್ನಾ ಮೂಲದವನು. ಎರಡು - ಮೂರು ತಿಂಗಳಿಂದ ಹುಬ್ಬಳ್ಳಿಗೆ ಬಂದಿದ್ದಾಗಿ ತಿಳಿಸಿದ್ದ.

ಆತನ ಕುರಿತು ಹೆಚ್ಚಿನ ವಿವರ ತಿಳಿಯಲು ಸ್ಥಳ ವಿಚಾರಣೆಗೆ ಕರೆದೊಯ್ಯಲಾಗುತ್ತಿತ್ತು. ಆಗ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿ ಪರಾರಿಯಾಗುವ ಯತ್ನ ನಡೆಸಿದ. ಆಗ ಪೊಲೀಸರು ಗುಂಡು ಹಾರಿಸಿದಾಗ ಆರೋಪಿಯ ಸಾವು ಸಂಭವಿಸಿದೆ ಎಂದು ಹೇಳಿದರು.

## ತಾವರಕೆರೆಯಲ್ಲಿ ಮಹಿಳೆ ಮೇಲೆ ಹಲ್ಲೆ 6 ಮಂದಿ ಬಂಧನ

ದಾವಣಗೆರೆ, ಏ.13- ಚನ್ನಗಿರಿ ತಾಲ್ಲೂಕಿನ ತಾವರಕೆರೆ ಗ್ರಾಮದಲ್ಲಿ ಮಹಿಳೆಯೊಬ್ಬರ ಮೇಲೆ ಗುಂಪೊಂದು ಅಮಾನುಷವಾಗಿ ಹಲ್ಲೆ ನಡೆಸಿದ ಘಟನೆಗೆ ಸಂಬಂಧಿಸಿದಂತೆ 6ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮೊಹಮ್ಮದ್ ನಿಯಾಜ್ (32), ಮೊಹಮ್ಮದ್ ಗೌಸ್ ಪೀರ್ (45), ಚಾಂದ್ ಭಾಷಾ (35), ಇನಾಯತ್ ಉಲ್ಲಾ (51), ದಸ್ತಗಿರ್ (24), ರಸೂಲ್ ಟಿ.ಆರ್ (42) ಬಂಧಿತರು. ಈ ಘಟನೆಗೆ ಸಂಬಂಧಿಸಿದಂತೆ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ಏಪ್ರಿಲ್ 7 ರಂದು, ಶಬೀನಾ ಭಾನು ಎಂಬ ಮಹಿಳೆ ತಮ್ಮ ಸಂಬಂಧಿ ನಸ್ರೀನ್ ಮತ್ತು ಆಕೆಯ ಸ್ನೇಹಿತ ಫಯಾಜ್ ಜೊತೆ ಬುಕ್ಕಾಂಬುದಿ ಗಿರಿ (ಸಣ್ಣಬೆಟ್ಟ) ಗೆ ತೆರಳಿದ್ದರು. ಮಧ್ಯಾಹ್ನ 3 ಗಂಟೆ ಸುಮಾರಿಗೆ ಮನೆಗೆ ವಾಪಸ್ಸಾದ ನಂತರ, ಶಬೀನಾಭಾನು ಅವರು ವೈದ್ಯರ ಸಲಹೆಯ ಮೇರೆಗೆ ಮಾತ್ರೆಗಳನ್ನು ಸೇವಿಸಿ ಮಲಗಿದ್ದರು. ಈ ವೇಳೆ ನಸ್ರೀನ್ ಮನೆಯಲ್ಲೇ ಉಳಿದು ಕೊಂಡರು. ನಂತರ ಫಯಾಜ್ ಎಂಬಾತ ಶಬೀನಾಭಾನು ಅವರ ಮನೆಗೆ ಬಂದಿದ್ದ. ಆಗ ಶಬೀನಾ ಭಾನು ಅವರ ಪತಿ ಜಮೀಲ್ ಅಹಮ್ಮದ್ ಮನೆಗೆ ಬಂದಿದ್ದು, ನಸ್ರೀನ್ ಮತ್ತು ಫಯಾಜ್ ಅವರನ್ನು ಒಟ್ಟಿಗೆ ನೋಡಿದಾಗ ಕೋಪಗೊಂಡಿದ್ದಾರೆ.

ಏಪ್ರಿಲ್ 9 ರಂದು, ಜಮೀಲ್ ಅಹಮ್ಮದ್ ಸ್ನೇಹಿತರೊಂದಿಗೆ ಸೇರಿ ಮಸೀದಿ ಬಳಿ ಶಬೀನಾಭಾನು, ನಸ್ರೀನ್ ಮತ್ತು ಫಯಾಜ್ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಶಬೀನಾಭಾನು ಅವರು ನೀಡಿದ ದೂರಿನ ಮೇರೆಗೆ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

# ವಸ್ತುನಿಷ್ಠ ಮರು ಗಣತಿ ನಡೆಸಲು ಆಗ್ರಹ

(1ನೇ ಪುಟದಿಂದ) ಗಣತಿ ವರದಿ ಬಿಡುಗಡೆಗೆ ಆಕ್ಷೇಪ ವ್ಯಕ್ತಪಡಿಸುವ ಮೂಲಕ ಸಮಾಜದ ಹಿತಕ್ಕಾಗಿ ಬಂಡೆಯಂತೆ ಗಟ್ಟಿಯಾಗಿ ನಿಂತು ಸಮಾಜದ ಪರ ಧ್ವನಿ ಎತ್ತುವ ಎಸ್ಸೆಸ್ ಗುಣ ಮೆಚ್ಚುವಂತಹದ್ದು ಎಂದು ಹೇಳಿದರು.

ಶ್ರೀ ಗುರು ಚರಂತಪ್ಪಜ್ಜ ಮಹಾಸ್ವಾಮಿಗಳವರದು ಅಪರೂಪದ ವ್ಯಕ್ತಿತ್ವ. ತಪಸ್ವಿಗಳು, ಪವಾಡ ಪುರುಷರೂ ಆಗಿದ್ದರು. ಭಕ್ತರ ಕಲ್ಯಾಣವನ್ನು ಬಯಸಿದವರು ಎಂದು ಚರಂತಪ್ಪಜ್ಜ ಅವರ ಮಹಿಮೆಯನ್ನು ಕೊಂಡಾಡಿದ ಅವರು,ಪ್ರಕೃತಿ ಮುಂದೆ ಯಾವುದೇ ಪವಾಡವಿಲ್ಲ. ಪ್ರಕೃತಿಗೆ ಅದ್ಭುತ ಶಕ್ತಿ ಇದೆ ಎಂದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಸರ್ಕಾರಗಳು ಅನ್ನ ದಾಸೋಹ, ಅಕ್ಷರ ದಾಸೋಹ, ಜ್ಞಾನ ದಾಸೋಹಕ್ಕೆ ಒತ್ತು ನೀಡುವ ಮುನ್ನವೇ ಮಠಮಾನ್ಯಗಳು ಹಸಿದವರಿಗೆ ಅನ್ನ, ನಿರಕ್ಷರ ಕುಕ್ಷಿಗಳಿಗೆ ಅಕ್ಷರ ಮತ್ತು ಜ್ಞಾನ ದಾಸೋಹವನ್ನು ಉಚಿತವಾಗಿ ನೀಡುವ ಮೂಲಕ ಜನರ ಬದುಕು, ವ್ಯಕ್ತಿತ್ವವನ್ನು ವಿಕಸನಗೊಳಿಸುವ ಕೆಲಸ ಮಾಡಿರುವುದು ಹೆಮ್ಮೆಯ ಸಂಗತಿ ಎಂದರು.

ರಾಜಕಾರಣಿಗಳಿಗೆ, ಸರ್ಕಾರಿ ನೌಕರರಿಗೆ ನಿವೃತ್ತಿ ಇದೆ. ಆದರೆ ಮಠಾಧೀಶರುಗಳಿಗೆ ಯಾವುದೇ ನಿವೃತ್ತಿ ಇರುವುದಿಲ್ಲ. ಅವರ ಸ್ಥಾನಮಾನಗಳು ಸಹ ಭದ್ರವಾಗಿರುತ್ತವೆ. ಲೋಕ ಕಲ್ಯಾಣಕ್ಕಾಗಿ ನಾಡು ಸುತ್ತಿ ಧರ್ಮ ಜಾಗೃತಿಯನ್ನು ಮಾಡುತ್ತಾರೆ. ನಮ್ಮ ಕುರ್ಚಿಗಳು ಶಾಶ್ವತವಲ್ಲ. ಬದಲಾಗಿ ನಾವು ಮಾಡುವ ಜನಪರ ಕಾರ್ಯಗಳು ಶಾಶ್ವತವಾಗಿ ಉಳಿಯುತ್ತವೆ ಎಂದು ಹೇಳಿದರು.

'ಚರಂತಾರ್ಯ ಶ್ರೀ' ಪ್ರಶಸ್ತಿ ಸ್ವೀಕರಿಸಿದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮಾತನಾಡಿ, ಪ್ರಶಸ್ತಿ ಸಿಕ್ಕಿರುವುದು ನನಗೆ ಅತ್ಯಂತ ಸಂತಸ ತಂದಿದ್ದು, ಮತ್ತಷ್ಟು ಜವಾಬ್ದಾರಿಯನ್ನು ಹೆಚ್ಚು ಮಾಡಿದೆ. ಸಮಾಜ ಸಂಘಟನೆಯ ಬಲವರ್ಧನೆಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ನಂದಿಪುರ ಪುಣ್ಯಕ್ಷೇತ್ರದ ಡಾ.ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಹಿರಿಯ ಸಾಹಿತಿ ಪ್ರೊ. ಭಿಕ್ಷಾವರ್ತಿಮಠ, ಗಂಗಾವತಿಯ ಸಾಹಿತಿ ಎಸ್.ವಿ. ಪಾಟೀಲ್ ಗುಂಡೂರು, ಹಂಪಿ ಕನ್ನಡ ವಿವಿ ಸಹಾಯಕ ಕುಲಸಚಿವ ಡಾ. ಎಂ.ಎಂ. ಶಿವಪ್ರಕಾಶ್ ಮಾತನಾಡಿದರು.

ಬಿಳಿಕಿ ಹಿರೇಮಠದ ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ, ತಾವರೆಕೆರೆ ಶಿಲಾಮಠದ ಡಾ. ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಯರಗುಂಟೆ ಮಠದ ಶ್ರೀ ಪರಮೇಶ್ವರ ಸ್ವಾಮೀಜಿ, ಹೆಚ್.ಎಂ. ಗುರುಬಸವರಾಜಯ್ಯ, ಬೆಂಗಳೂರಿನ ಗವಾಯಿ ದೇವೇಂದ್ರ ಕುಮಾರ್ ಪತ್ತಾರ್, ಹಾಸ್ಯ ಕಲಾವಿದ ಕೋಗಳಿ ಕೊಟ್ರೇಶ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಇದೇ ವೇಳೆ ಅಂತರರಾಷ್ಟ್ರೀಯ ಯೋಗ ಪಟು ಹರಿಹರದ ಕೆ.ವೈ. ಸೃಷ್ಟಿ ಅವರ ಯೋಗ ಪ್ರದರ್ಶನ ನೋಡುಗರ ಹುಬ್ಬೇರಿಸುವಂತಿತ್ತು.

ಸುಗುಣ ಯೋಗೇಶ್ ಪ್ರಾರ್ಥಿಸಿದರು. ವಿನುತಾ ರವಿ ಸ್ವಾಗತಿಸಿದರು. ಕುಸುಮ ರುದ್ರೇಶ್ ನಿರೂಪಿಸಿದರು. 'ಭವ್ಯ ಬೆಳಕು' ಗ್ರಂಥ ಲೋಕಾರ್ಪಣೆಯಾಯಿತು.

## ಯೋಜನೆಗೆ ಸ್ವತಂತ್ರ ಸಮೀಕ್ಷೆಯ ಶಿಫಾರಸ್ಸು

(1ನೇ ಪುಟದಿಂದ) ದಿನಗಳಿಗೆ ವಿಸ್ತರಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ.

ಅರಣ್ಯ ಪ್ರದೇಶಗಳಲ್ಲಿರುವ ಬುಡಕಟ್ಟು ಜನರಿಗೆ ನಿಗದಿಪಡಿಸಲಾಗಿರುವ 150 ದಿನಗಳ ಖಾತ್ರಿಯನ್ನು 200 ದಿನಗಳಿಗೆ ಹೆಚ್ಚಿಸಬೇಕೆಂದು ವರದಿಯಲ್ಲಿ ತಿಳಿಸಲಾಗಿದೆ.

ಹಣದುಬ್ಬರಕ್ಕೆ ತಕ್ಕಂತೆ ಕೂಲಿ ದರಗಳನ್ನು ಸರಿಹೊಂದಿಸಬೇಕು. ಆರ್ಥಿಕ ವಾಸ್ತವಿಕತೆಗೆ ಅನುಗುಣವಾಗಿ ಗ್ರಾಮೀಣ ಕಾರ್ಮಿಕರಿಗೆ ಗೌರವಯುತ ಕೂಲಿ ಒದಗಿಸಬೇಕು. ಪ್ರಸ್ತುತ ಕೂಲಿ ದರಗಳು ದೈನಂದಿನ ವೆಚ್ಚಗಳನ್ನು ನಿಭಾಯಿಸಲು ಸಾಕಾಗುತ್ತಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

# ಒಳಮೀಸಲಾತಿ ಬಳಿಕ ಸಂಭ್ರಮಿಸೋಣ

(1ನೇ ಪುಟದಿಂದ) ಆಹ್ವಾನಿಸಿದ್ದರು. ಈಗ ಅವರೆಲ್ಲರನ್ನೂ ಮನವೊಲಿಸಿ, ಜನ್ಮದಿನಾಚರಣೆ ಕಾರ್ಯಕ್ರಮವನ್ನು ರದ್ದುಗೊಳಿಸಿರುತ್ತೇನೆ ಎಂದು ತಿಳಿಸಿದ್ದಾರೆ.

ಪರಿಶಿಷ್ಟ ಸಮುದಾಯದಲ್ಲಿನ ನೊಂದ ಜನರಿಗೆ ಒಳಮೀಸಲಾತಿ ಜಾರಿ ಮೂಲಕ ಸಾಮಾಜಿಕ ನ್ಯಾಯ ಕಲ್ಪಿಸಬೇಕೆಂಬುದು ನನ್ನ ಹಾಗೂ ಸಿದ್ದರಾಮಯ್ಯ ಅವರ ಗುರಿ ಆಗಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ನಮ್ಮ ಧ್ವನಿಗೆ ಬೆಂಬಲವಾಗಿ ನಿಂತಿದ್ದು, ನಮ್ಮ ಎಲ್ಲ ಬೇಡಿಕೆಗಳಿಗೆ ಸ್ಪಂದಿಸುತ್ತಿದ್ದಾರೆ. ಆದರೂ ಕಾಣದ ಕೈಗಳು ಒಳಮೀಸಲಾತಿಗೆ ಬಹಳಷ್ಟು ಅಡ್ಡಿಪಡಿಸಿದ್ದು, ಇದರ ವಿರುದ್ಧ ಧ್ವನಿ ಕೂಡ ಎತ್ತಿರುವೆ. ಜೊತೆಗೆ ಮುಖ್ಯಮಂತ್ರಿಗಳ ಮೇಲೆ ನಿರಂತರ ಒತ್ತಡ ತರುವ ಕೆಲಸ ಮಾಡಲಾಗುತ್ತಿದೆ.

ಒಳಮೀಸಲಾತಿ ಜಾರಿ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆಯೆಂದು ಸುಪ್ರೀಂ ಕೋರ್ಟ್ ಆಗಸ್ಟ್ 1, 2024ರಂದು ತೀರ್ಪು ನೀಡುತ್ತಿದ್ದಂತೆ, ಕೆಲ ಕಾಣದ ಕೈಗಳು 10 ಸಾವಿರ ಹುದ್ದೆಗಳನ್ನು ತುಂಬಿಕೊಳ್ಳಲು ತರಾತರಿಯಲ್ಲಿ ಅರ್ಜಿ ಆಹ್ವಾನಿಸಿದ್ದವು. ಬಳಿಕ ರಾಜ್ಯ ಸರ್ಕಾರ ಅಕ್ಟೋಬರ್ 28ರಂದು ರಾಜ್ಯದಲ್ಲಿ ಯಾವುದೇ ಹುದ್ದೆಗಳನ್ನು ನೇಮಕಾತಿ ಪ್ರಕ್ರಿಯೆ ಕೈಗೊಳ್ಳದಂತೆ ಆದೇಶ ನೀಡಿದೆ. ನಾವುಗಳು ಕೂಡ ಬಹಳಷ್ಟು ಗೊಂದಲ ಮೂಡಿಸಲು ಯತ್ನಿಸದೆ, ಹಠಕ್ಕೆ ಬೀಳದೆ ಎಲ್ಲ ನೋವನ್ನು ನುಂಗಿಕೊಂಡು ಒಳಮೀಸಲಾತಿ ಜಾರಿಯತ್ತ ಆಸೆಗಣ್ಣಿನಿಂದ ನೋಡುತ್ತಿದ್ದೇವೆ.

ಜೊತೆಗೆ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗಕ್ಕೆ ಪತ್ರ ಬರೆದು, ನಿಯೋಗ ತೆರಳಿ ಸರ್ವೇ ಸಂದರ್ಭದಲ್ಲಿ ಅಳವಡಿಸಿಕೊಳ್ಳಬೇಕಾದ ಅಂಶಗಳನ್ನು ಅವರುಗಳ ಗಮನಕ್ಕೆ ತರಲಾಗಿದೆ. ಎಲ್ಲಿಯೂ ಯಾವ ಸಮುದಾಯಗಳಿಗೂ ಅನ್ಯಾಯ ಆಗದ ರೀತಿ ಜಾತಿಗಣತಿ ಸರ್ವೇ ಪಾರದರ್ಶಕವಾಗಬೇಕು, ಶೀಘ್ರ ಒಳಮೀಸಲಾತಿ ಜಾರಿಗೊಳ್ಳಬೇಕೆಂಬುದು ನಮ್ಮ ಬೇಡಿಕೆ ಆಗಿದೆ.

ಆದ್ದರಿಂದ ಜನ್ಮ ದಿನಾಚರಣೆ ಸಂಭ್ರಮಕ್ಕಿಂತಲೂ ನಾನು ಸೇರಿ ಎಲ್ಲರಿಗೂ ಒಳಮೀಸಲಾತಿ ಜಾರಿ ಮುಖ್ಯ ವಿಷಯವಾಗಬೇಕು. ಏ.15ರಂದು ನನಗೆ ಶುಭಾಶಯ ಕೋರಲು ನನ್ನನ್ನು ಹುಡುಕಿಕೊಂಡು ಬರುವ ಅಗತ್ಯ ಇಲ್ಲ. ತಾವುಗಳು ಇರುವ ಸ್ಥಳ, ಕಾಲೋನಿ, ಹಟ್ಟಿಗಳಲ್ಲಿ ಜಾತಿಗಣತಿ ಕಾರ್ಯದ ಸಂದರ್ಭ ಯಾವುದೇ ಕಾರಣಕ್ಕೂ ಆದಿಕರ್ನಾಟಕ, ಆದಿದ್ರಾವಿಡ ಎಂದು ಬರೆಸಬಾರದು. ಮೂಲ ಜಾತಿಯನ್ನು ಕಡ್ಡಾಯವಾಗಿ ಬರೆಸುವಂತೆ ಸಮುದಾಯದವರಲ್ಲಿ ಜಾಗೃತಿ ಮೂಡಿಸಬೇಕು ಎಂದು ಕೋರಿದ್ದಾರೆ.

ಒಳಮೀಸಲಾತಿ ಪರಿಶಿಷ್ಟ ಗುಂಪಿನಲ್ಲಿರುವ 101 ಜಾತಿಗೂ ನ್ಯಾಯ ಕಲ್ಪಿಸುವ ಏಕೈಕ ಮಾರ್ಗವಾಗಿದೆ. ಜೊತೆಗೆ ಸಾಮಾಜಿಕ ನ್ಯಾಯದ ಹರಿಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಪರಿಶಿಷ್ಟ ಜಾತಿಯಲ್ಲಿನ ಎಲ್ಲರಿಗೂ ನ್ಯಾಯ ಕೊಡಿಸಲು ದಿಟ್ಟ ಹೆಜ್ಜೆಯನ್ನಿಟ್ಟಿದ್ದಾರೆ. ನಾವುಗಳು ಅವರ ಕಾರ್ಯಕ್ಕೆ ಬೆಂಬಲವಾಗಿ ನಿಲ್ಲಬೇಕು. ಮುಖ್ಯವಾಗಿ ಜಾತ್ರೆ, ಹಬ್ಬ-ಹರಿದಿನ ಆಚರಣೆ ಮರೆತು ಜಾತಿಗಣತಿ ಕಾರ್ಯದ ಯಶಸ್ವಿಗೆ ಅದರಲ್ಲೂ ಸರ್ವೇ ಸಂದರ್ಭ ಮೂಲ ಜಾತಿ ದಾಖಲು ಆಗುವ ರೀತಿ ಜನರಲ್ಲಿ ಜಾಗೃತಿ ವಹಿಸಬೇಕು. ಈ ನಿಟ್ಟಿನಲ್ಲಿ ನನ್ನ ಜನ್ಮ ದಿನ ಏ.15ರಂದು ಈ ಕಾರ್ಯಕ್ಕೆ ಚಾಲನೆ ನೀಡುವ ಮೂಲಕ ನೊಂದ ಜನರಿಗೆ ಹಕ್ಕು ಕೊಡಿಸಲು ಶ್ರಮಿಸಬೇಕೆಂದು ಕೋರುತ್ತೇನೆ ಎಂದು ತಿಳಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಪಶ್ಚಿಮ 40x60, 32x50 ಉತ್ತರ 40x60 ವಿನಾಯಕ ಬಡಾವಣೆ ಉತ್ತರ 40x85, 40x60 ಬನಶಂಕರಿ ಬಡಾವಣೆ ಪೂರ್ವ 30x50, ಪಶ್ಚಿಮ 40x70
ಐಗೂರು ವಿಜಯಕುಮಾರ
99457 02495

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ರಾಂ ಅಂಡ್ ಕೋ ಸರ್ಕಲ್ ಹತ್ತಿರ ಪೂರ್ವ 30x40 ವಿದ್ಯಾನಗರ ಮುಖ್ಯ ರಸ್ತೆ ಪೂರ್ವ+ದಕ್ಷಿಣ 90x60 ಬನಶಂಕರಿ ಬಡಾವಣೆ (60 ರಸ್ತೆಗೆ) ಪಶ್ಚಿಮ 36x71
ಐಗೂರು ವಿಜಯಕುಮಾರ
99457 02495

**ಹರಿಹರದಲ್ಲಿ ಮಳಿಗೆ ಬಾಡಿಗೆ ಇದೆ**
ಹರಿಹರ ನಗರದ ಟೆಂಪಲ್ ರಸ್ತೆಯಲ್ಲಿ 18x80 ಅಡಿ ವಿಸ್ತೀರ್ಣವುಳ್ಳ ಉತ್ತರ ದಿಕ್ಕಿಗೆ ಮುಖ ಮಾಡಿರುವ ಲಿಫ್ಟ್ ಅನುಕೂಲವಿರುವ ನೆಲ ಮಹಡಿ, ಮೊದಲನೇ ಮಹಡಿ ಮತ್ತು ಮೂರನೇ ಮಹಡಿ (ಒಟ್ಟು ಮೂರು ಮಹಡಿಗಳು) ಇರುವ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. ವಿಚಾರಿಸಿ.
98442 94446, 79966 63639

**House for rent**
2 BHK # 240/2, Ground floor, 4th main, P.J. extension, Near nursery Jain vidyalaya school, Davangere - 577002.
9742961169, 8197400298

**ಮನೆ ಬಾಡಿಗೆಗೆ**
ಬಿಐಇಟಿ ಕಾಲೇಜು ರಸ್ತೆ ಆಂಜನೇಯ ಬಡಾವಣೆ 5ನೇ ಕ್ರಾಸ್ ನಲ್ಲಿ ನೆಲ ಮಹಡಿಯಲ್ಲಿ ಉತ್ತರ ಬಾಗಿಲು, ವಾಸ್ತು ಪ್ರಕಾರ ಇರುವ, ಹೊಸದಾಗಿ ಪೇಂಟ್ ಆಗಿರುವ ಹಾಗೂ ಸೋಲಾರ್ ವ್ಯವಸ್ಥೆ ಇರುವ 2 ಬೆಡ್ ರೂಮ್ ಮನೆ ಬಾಡಿಗೆಗೆ ಇದೆ.
98451 20016, 83101 19593

**ಬೇಕಾಗಿದ್ದಾರೆ**
ನಮ್ಮ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷರು ಮಾತ್ರ.
ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ಸೈಟ್‌ಗಳು ಮಾರಾಟಕ್ಕಿವೆ**
40x60 ಅಳತೆಯ ಅಕ್ಕ-ಪಕ್ಕದ 2 ದಕ್ಷಿಣ ದಿಕ್ಕಿಗಿರುವ ಸೈಟ್‌ಗಳು KHBಯಲ್ಲಿ ಮಾರಾಟಕ್ಕಿವೆ.
ಆಸಕ್ತರು ಸಂಪರ್ಕಿಸಿ :
98806 79746

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತ ಸೆಕ್ಯೂರಿಟಿ ಗಾರ್ಡ್ ಮತ್ತು ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ : 10,000/- ರಿಂದ 12,000/- ESI, PF ಸೌಲಭ್ಯವಿರುತ್ತದೆ.
96062 50026, 86603 98210

**URGENT REQUIREMENT**
WE'RE HIRING!
Banking Sector Telecalling
Telecaller : Female
Qualification : PUC or Any Degree
Salary : 10000 + Incentive
Address : 3367/1, Arunodaya MCC B Block, Shamanur Road, Opp. Ashraya Hospital, Davangere - 577 004
91084 72349

**ಜಮೀನು ಬೇಕಾಗಿದೆ**
ದಾವಣಗೆರೆ - ಹರಿಹರ ಭಾಗದಲ್ಲಿ 4 ಎಕರೆ ಜಮೀನು ಬೇಕಾಗಿದ್ದು, ಆಸಕ್ತರು ಸಂಪರ್ಕಿಸಿ
90088 18453

**ಸ್ಪೋಕನ್ ಇಂಗ್ಲೀಷ್ & ಕಂಪ್ಯೂಟರ್ ಸಮ್ಮರ್ ಕ್ಯಾಂಪ್**
ಶಾಲಾ ಮಕ್ಕಳು/ವಯಸ್ಕರಿಗಾಗಿ ವಸತಿ
ದಾವಣಗೆರೆ/ಹರಿಹರ.
93802 29199

**ಡಿಪ್ಲೋಮಾ ಇನ್ ಪೇಷಂಟ್‌ಕೇರ್ ನರ್ಸಿಂಗ್ 2 ವರ್ಷ**
ವಿದ್ಯಾರ್ಹತೆ : SSLC ಪಾಸ್, PUC ಪಾಸ್ / ಫೇಲ್
ಯಶಸ್ವಿ 15ನೇ ವರ್ಷದಲ್ಲಿ ಮುನ್ನುಗ್ಗುತ್ತಿರುವ ನಮ್ಮ ಸಂಸ್ಥೆಯಲ್ಲಿ ನರ್ಸಿಂಗ್ ತರಬೇತಿ ಪಡೆದು ಸಾವಿರಾರು ವಿದ್ಯಾರ್ಥಿಗಳು ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ.
ಮಾನಸ ಕಮ್ಯೂನಿಟಿ ಕಾಲೇಜ್ (ರಿ.)
LK ಕಾಂಪ್ಲೆಕ್ಸ್, 1ನೇ ಮಹಡಿ, 1ನೇ ಕ್ರಾಸ್, ಅಶೋಕ ರಸ್ತೆ, ದಾವಣಗೆರೆ -02
97402 58276

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್, ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ವಿಳಾಸ : ತ್ರಿಶೂಲ್ ಟಾಕೀಸ್ ರೋಡ್, ಕೆಟಿಜೆ ನಗರ, ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
96860 22969

**WANTED**
Store Incharge Furniture shop OM Rakshak Enterprises Mam's joint road Davanagere. Good salary+Incentive
87923 44464, 79754 02627

**ಬೇಕಾಗಿದ್ದಾರೆ**
ಬಾರ್‌ನಲ್ಲಿ ಕೆಲಸ ಮಾಡಲು ಕ್ಯಾಷಿಯರ್ & ಸಪ್ಲೈಯರ್ ಬೇಕಾಗಿದ್ದಾರೆ.
ಪ್ರಕಾಶ್ ಬಾರ್ & ರೆಸ್ಟೋರೆಂಟ್
78992 18321

**ಬೇಕಾಗಿದ್ದಾರೆ**
ದಾವಣಗೆರೆ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್‌ನಲ್ಲಿ ತರಕಾರಿ ಕಟ್ ಮಾಡಲು ಮತ್ತು ಕ್ಲೀನಿಂಗ್‌ಗೆ ಮಹಿಳೆಯರು ಮತ್ತು ಪುರುಷರು ಹಾಗೂ ಡ್ರೈವಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಮಯ ಬೆಳಗ್ಗೆ 12 ರಿಂದ ಸಂಜೆ 5 ರವರೆಗೆ. ಉಚಿತ ಊಟ, ವಸತಿ ಸೌಲಭ್ಯದೊಂದಿಗೆ ಉತ್ತಮ ಸಂಬಳವಿದೆ ಸಂಪರ್ಕಿಸಿ.
88847 04025, 9448 980070

**ಬಾಂಧವ್ಯ ಹೋಂ ನರ್ಸಿಂಗ್ ಸರ್ವೀಸ್**
ವಯೋವೃದ್ಧರು, ಬೆಡ್ ರಿಡನ್ ಪೇಷಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ. ರೋಗಿಗಳಿಗೆ ಆಯಿಲ್ ಮಸಾಜ್ ಮಾಡಲಾಗುತ್ತದೆ.
ಜಯನಗರ, ಮೋರ್ ಎದುರು ರಸ್ತೆ, ನಿಟುವಳ್ಳಿ.
76191 70395, 9008832703

**ಪಿಗ್ಮಿ ಏಜೆಂಟರ್ ಬೇಕಾಗಿದ್ದಾರೆ**
ಭಾರತ ಸರ್ಕಾರದಿಂದ ಮಾನ್ಯತೆ ಪಡೆದಿರುವ ಜನ ಆಶಾ ಸ್ಮಾರ್ಟ್ ಬ್ಯಾಂಕ್ H.O. ಮೈಸೂರು ದಾವಣಗೆರೆ ಶಾಖೆಯಲ್ಲಿ ನಗರ ವಲಯದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಬಳ, ಇನ್ ಸೆಂಟಿವ್ ಮತ್ತು ಪಿಎಫ್, ಹೆಲ್ತ್ ಇನ್ಸೂರೆನ್ಸ್ ಸೌಲಭ್ಯವಿರುತ್ತದೆ.
99720 42558

**ಉಚಿತ ಕಂಪ್ಯೂಟರ್ ಕೋರ್ಸ್**
ಕಂಪ್ಯೂಟರ್ ಬೇಸಿಕ್ ಕೋರ್ಸ್ ಅನ್ನು ಉಚಿತವಾಗಿ ಕಲಿಯಿರಿ ಹಾಗೂ MS Office, Typing Q, Tally Prime ಕೋರ್ಸ್‌ಗಳನ್ನು ಕೈಗೆಟುಕುವ ದರದಲ್ಲಿ ಕಲಿಯಿರಿ. Limited Seats Only.
Radar Computer Center
P.J. Extn. Near Byadagi Shetru School.
72049 03263

**ಮನೆ ಮಾರಾಟಕ್ಕಿದೆ**
ಡಾಲರ್ಸ್ ಕಾಲೋನಿಯಲ್ಲಿ 30x50 West ಕೆಳಗಡೆ Two ಬೆಡ್ ರೂಮ್, ಮೇಲುಗಡೆ Two ಬೆಡ್ ರೂಮ್ ಮನೆ, Rate - 1 ಕೋಟಿ 25 ಲಕ್ಷ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ರೊಟ್ಟಿ, ಚಪಾತಿ ಹಾಗೂ ಹೋಳಿಗೆ ಮಾಡಲು ಲಿಂಗಾಯತ ಕೆಲಸಗಾರರು ಬೇಕಾಗಿದ್ದಾರೆ.
78926 46968
99161 79135

**ಬೇಕಾಗಿದ್ದಾರೆ**
ಪ್ರಿಂಟಿಂಗ್ ಪ್ರೆಸ್ ಕೆಲಸಕ್ಕೆ ನುರಿತ ಡಿ.ಟಿ.ಪಿ. ಆಪರೇಟರ್ ಮತ್ತು ಅನುಭವವುಳ್ಳ ಆಫ್ ಸೆಟ್ ಪ್ರಿಂಟರ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ ದೊರೆಯುತ್ತದೆ. ಕೂಡಲೇ ಸಂಪರ್ಕಿಸಿ :
ರಾಜು ಪ್ರಿಂಟರ್ಸ್, ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
99640 28818

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**ಬಂಗಾರದ ಅಂಗಡಿ ಬಾಡಿಗೆಗಿದೆ**
ಫರ್ನಿಚರ್ ಸಮೇತ ಬೆಳ್ಳಿ - ಬಂಗಾರದ ಅಂಗಡಿ ಮಂಡಿಪೇಟೆಯಲ್ಲಿ ಬಾಡಿಗೆಗಿದೆ.
ಸಂಪರ್ಕಿಸಿ : ದಾವಣಗೆರೆ.
63619 31012, 94810 13689

**Land for Rent / Lease**
2 acres in 4 acres according to your Requirement
Near Amaravathi, Harihara.
Cement Road, Power & Bore facility
94814 17877

**ಮನೆ ಬಾಡಿಗೆಗೆ ಇದೆ**
2ನೇ ಮಹಡಿ, 2 ಬೆಡ್‌ರೂಂ ಹೊಸದಾಗಿ ನಿರ್ಮಿಸಿದ ಮನೆ ದೇವರಾಜ್ ಅರಸ್ ಲೇಔಟ್, ಎ ಬ್ಲಾಕ್, ದಾವಣಗೆರೆ ಉತ್ತರ ದಿಕ್ಕು
72040 22829
63643 14502

**2nd PUC Arts / Commerce / Science**
ಫೇಲಾದ ವಿದ್ಯಾರ್ಥಿಗಳು ಉಳಿದಿರುವ ವಿಷಯಗಳಿಗೆ ಕರೆಸ್ಪಾಂಡೆನ್ಸ್ ಮುಖಾಂತರ ಪರೀಕ್ಷೆ ತೆಗೆದುಕೊಳ್ಳಬಹುದು.
ಶ್ರೇಯಸ್ ಕರೆಸ್ಪಾಂಡೆನ್ಸ್ ಕಾಲೇಜ್
ದಾವಣಗೆರೆ.
97317 40827, 83107 47112

**ಮನೆಯ ಸಹಾಯಕರ ಅಗತ್ಯವಿದೆ**
ದಾವಣಗೆರೆ ಯಲ್ಲಿನ ಮನೆಯ ಕೆಲಸಕ್ಕೆ ಒಬ್ಬ ನಂಬಿಕಸ್ತ ಮಹಿಳಾ ಸಹಾಯಕಿ ಬೇಕಾಗಿದ್ದಾರೆ. ನಿತ್ಯ ಕೆಲಸಗಳಾದ ಮನೆ ಸ್ವಚ್ಛತೆ, ಅಡುಗೆ ಮತ್ತು ಇತರ ಸಾಮಾನ್ಯ ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ. ಅನುಭವ ಹೊಂದಿರುವವರಿಗೆ ಆದ್ಯತೆ ಊಟದ ವ್ಯವಸ್ಥೆ ಇದೆ. ಆಸಕ್ತರು ಸಂಪರ್ಕಿಸಿ:
89513 51033, 99019 13553

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**WANTED**
DAVANGERE
* Marketing Executive
* Accountant (Ladies)
* Godown Incharge.
63620 23451
97434 37003

**ಮಳಿಗೆ ಬಾಡಿಗೆಗಿದೆ**
7x15 ಅಳತೆಯ ಮಳಿಗೆ ಬಾಡಿಗೆಗೆ ಇದೆ. ಮಂಡಿಪೇಟೆ ಮೇನ್ ರೋಡ್, ಕುಮಾರ ಜ್ಯೂಯಲರ್ಸ್ ಪಕ್ಕ, ದಾವಣಗೆರೆ.
ಸಂಪರ್ಕಿಸಿ :
99642 46464
98867 07145

**ಫ್ಲಾಟ್ ಮಾರಾಟಕ್ಕಿದೆ**
ವಿದ್ಯಾನಗರ, ತರಳಬಾಳು ಬಡಾವಣೆ 17ನೇ ಕ್ರಾಸ್, ಶಿವ ಸರ್ವೀಸ್ ಸ್ಟೇಷನ್ ಹಿಂಭಾಗದ ಕಲ್ಲೇಶ್ವರ ಎಲೈಟ್ಸ್‌ನಲ್ಲಿ ಫ್ಲಾಟ್ ಮಾರಾಟಕ್ಕಿದೆ.
98863 49555
99807 28533

**ಬಾಡಿಗೆಗಿವೆ**
ಮೊದಲನೇ ಮಹಡಿಯಲ್ಲಿ 16x23 ಅಳತೆಯ 3 ರೂಮುಗಳು, ಎರಡನೇ ಮಹಡಿಯಲ್ಲಿ 55x36 ಅಳತೆಯ 2 ದೊಡ್ಡ ಹಾಲುಗಳು. Rent for commercial office, hostel PG, DCM township, Davanagere
98444 99943

**ಬೇಕಾಗಿದ್ದಾರೆ**
ಆಂಜನೇಯ ಬಡಾವಣೆಯ ಮನೆಯಲ್ಲಿ ಅಡುಗೆ ಕೆಲಸಕ್ಕೆ ಹೆಣ್ಣು ಮಕ್ಕಳು ಬೇಕಾಗಿದ್ದಾರೆ.
94486 55850

**WANTED**
Fitness Assistant Teacher
12 to 15+ salary
(Only Male Candidates)
Degree Pass
Good Communication
Interested in Sports & Fitness
Age limit -22 to 32
Freshers Can also Apply
86608 58282

**TUITIONS**
Class 1-10
(State/CBSE / ICSE / IGCSE / Olympiad
PU 1-2 (PCMB)
Supplementary
98444 92888

**ಬೇಕಾಗಿದ್ದಾರೆ**
ಬಾರ್‌ನಲ್ಲಿ ಕೆಲಸ ಮಾಡಲು ಸಪ್ಲೈಯರ್ ಬೇಕಾಗಿದ್ದಾರೆ.
ಸಂತೋಷ್ ಬಾರ್ & ರೆಸ್ಟೋರೆಂಟ್
98442 99666

**GSS ACADEMY**
Davangere
PUC SUPPLEMENTARY
TUTION Available 100% Results
SCIENCE and COMMERCE
PCMB and EBASt
ಪಿಯುಸಿ ಫೇಲಾದ ವಿದ್ಯಾರ್ಥಿಗಳಿಗೆ
84968 85888
76768 79498


## ಎಸ್. ನಾರಾಯಣಪ್ಪ ನಿಧನ



ದಾವಣಗೆರೆ ಸಿಟಿ ಜಾಲಿನಗರ ವಾಸಿ, ಹೂವಿನ ವ್ಯಾಪಾರಿ
**ಎಸ್. ನಾರಾಯಣಪ್ಪ** ಅವರು
ದಿನಾಂಕ 13-04-2025ರ ಭಾನುವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14-04-2025ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಮೊ. : 81507 47873, 90366 36096

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 12-04-2025ರಂದು ನಿಧನರಾದ ದಾವಣಗೆರೆಯ ಪ್ರಕಾಶ್ ಏಜೆನ್ಸೀಸ್ ಮತ್ತು ವೆಂಕಟೇಶ್ ಟ್ರೇಡಿಂಗ್ ಕಂಪನಿ (ಭಂಡಾರಿ) ಪಾಲುದಾರರಾದ
**ಶ್ರೀ ಪ್ರಕಾಶ್ ಏಕಬೋಟೆ** ಅವರಿಗೆ
ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಸುರೇಶ್ ಭಾರದ್ವಾಜ್ ✦ ರಮೇಶ್ ಭಾರದ್ವಾಜ್
✦ ರಂಗನಾಥ್ ಭಾರದ್ವಾಜ್,
ಹಿರಿಯ ನಿರೂಪಕರು, ಟಿವಿ -9 ಕನ್ನಡ, ಬೆಂಗಳೂರು
ಮತ್ತು ಭಾರದ್ವಾಜ್ ಕುಟುಂಬ

# ಜಿಲ್ಲೆಗೆ ಮಹಿಳಾ ಆಯೋಗದ ಅಧ್ಯಕ್ಷರ ಭೇಟಿ



ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮಿ ಚೌಧರಿ ಅವರು ನಾಳೆ ದಿನಾಂಕ 15, 16 ಮತ್ತು 17 ರಂದು ದಾವಣಗೆರೆ ಜಿಲ್ಲಾ ಪ್ರವಾಸ ಕೈಗೊಳ್ಳುವರು.

ಇಂದು ರಾತ್ರಿ 8.30 ಕ್ಕೆ ದಾವಣಗೆರೆಗೆ ಆಗಮಿಸಿ ವಾಸ್ತವ್ಯ ಮಾಡುವರು. ನಾಳೆ ದಿನಾಂಕ 15 ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಜಯದೇವ ವೃತ್ತದ ಬಳಿ ಬ್ರಾಹ್ಮಣ ಹಾಸ್ಟೆಲ್ ಮುಂಭಾಗದಲ್ಲಿ ದಲಿತ ಸಂ ರಕ್ಷಣಾ ಸಮಿತಿಯಿಂದ ಹಮ್ಮಿಕೊಂಡಿರುವ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 1.30 ಕ್ಕೆ ಆವರಗೊಳ್ಳ ಗ್ರಾಮ ವ್ಯಾಪ್ತಿಯ ಕೇಂದ್ರೀಯ ವಿದ್ಯಾಲಯ ಹಿಂಭಾಗದಲ್ಲಿ ವಾಸಿಸುತ್ತಿರುವ ಕುಟುಂಬಗಳ ಸ್ಥಳಕ್ಕೆ ಭೇಟಿ ನೀಡುವರು. ನಂತರ ಸಂಜೆ 5 ಗಂಟೆಗೆ ದಾವಣಗೆರೆ ವಿಶ್ವವಿದ್ಯಾನಿಲಯದ ಮಹಿಳಾ ವಸತಿ ನಿಲಯಕ್ಕೆ ಭೇಟಿ ನೀಡಿ ವಾಸ್ತವ್ಯ ಮಾಡುವರು.

ನಾಡಿದ್ದು ದಿನಾಂಕ 16 ರ ಬುಧವಾರ ಬೆಳಿಗ್ಗೆ 10.30ಕ್ಕೆ ಜಗಳೂರು ತಾಲ್ಲೂಕು ಆಸ್ಪತ್ರೆ ಹಾಗೂ ತಾಲ್ಲೂಕು ಕಚೇರಿಗೆ ಭೇಟಿ ನೀಡುವರು. ಮಧ್ಯಾಹ್ನ 1 ಗಂಟೆಗೆ ಜಗಳೂರು ತಾಲ್ಲೂಕಿನ ಹನುಮಂತಾಪುರ ಗೊಲ್ಲರಹಟ್ಟಿ ಗ್ರಾಮಕ್ಕೆ ಭೇಟಿ ನೀಡುವರು ನಂತರ ಸಂಜೆ 5 ಗಂಟೆಗೆ ದಾವಣಗೆರೆಯಲ್ಲಿ ಬಾಲಕಿಯರ ಮೆಟ್ರಿಕ್ ನಂತರದ ಹಾಸ್ಟೆಲ್‌ಗೆ ಭೇಟಿ ನೀಡಿ ವಾಸ್ತವ್ಯ ಮಾಡುವರು.

ದಿನಾಂಕ 17 ರ ಗುರುವಾರ ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ಜಿಲ್ಲಾ ಆಸ್ಪತ್ರೆಗೆ ಭೇಟಿ, ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿವಿಧ ವಿಷಯಗಳ ಕುರಿತು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು.

# ಇಂದು-ನಾಳೆ ಸಾಯಿಬಾಬಾ ಪಾದುಕೆ ದರ್ಶನ





ದಾವಣಗೆರೆ : ಶಿರಡಿ ಸಾಯಿಬಾಬಾರವರ ಮೂರ್ತಿ ಮತ್ತು ಅವರು ತಮ್ಮ ಜೀವಿತ ಅವಧಿಯಲ್ಲಿ ಧರಿಸುತ್ತಿದ್ದ ಪಾದರಕ್ಷೆಗಳು ನಿನ್ನೆ ನಗರಕ್ಕೆ ಆಗಮಿಸಿದ್ದು, ಇಂದು ಮತ್ತು ನಾಳೆ ಬೆಳಿಗ್ಗೆ 8 ರಿಂದ ರಾತ್ರಿ 10 ರವರೆಗೆ ಎಂಸಿಸಿ 'ಎ' ಬ್ಲಾಕ್‌ನಲ್ಲಿನ ಶ್ರೀ ಸಾಯಿ ಮಂದಿರದಲ್ಲಿ ಪಾದುಕೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ. ಎರಡು ದಿನಗಳೂ ಮಧ್ಯಾಹ್ನ 12 ಕ್ಕೆ ಹಾಗೂ ಸಂಜೆ 6.30 ಕ್ಕೆ ಆರತಿ ಹಾಗೂ ದಾಸೋಹ ವ್ಯವಸ್ಥೆ ಮಾಡಲಾಗಿದೆ.

ಶಿರಡಿಯಿಂದ ನಾಲ್ವರು ಅರ್ಚಕರು ಆಗಮಿಸಿ, ವಿಶೇಷ ಪೂಜಾ ವಿಧಿ, ವಿಧಾನಗಳನ್ನು ನೆರವೇರಿಸಿಕೊಡಲಿದ್ದಾರೆ. ಪಾದುಕೆ ಮೆರವಣಿಗೆಗೆ ನಾಡಿನ ಹೆಸರಾಂತ ಕಲಾ ತಂಡಗಳನ್ನು ಆಹ್ವಾನಿಸಲಾಗಿದ್ದು, ಸುಮಾರು 30 ರಿಂದ 40 ಸಾವಿರ ಭಕ್ತರು ಪಾದುಕೆ ವೀಕ್ಷಣೆ ಮಾಡಲಿದ್ದಾರೆ.


## ಹೃದಯಪೂರ್ವಕ ಕೃತಜ್ಞತೆಗಳು



ರಘುನಾಥ್ ಎಸ್.

ಮಾನ್ಯ ಮತದಾರ ಬಾಂಧವರೇ,

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.), ಬೆಂಗಳೂರು ಇದರ ದಾವಣಗೆರೆ ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ದಿನಾಂಕ 13.04.2025ರಂದು ನಡೆದ ಚುನಾವಣೆಯಲ್ಲಿ ನನಗೆ ಮತದಾನ ಮಾಡಿದ ದಾವಣಗೆರೆ ಜಿಲ್ಲೆಯ ಮಾನ್ಯ ಮತದಾರರಿಗೆ ಹೃದಯಪೂರ್ವಕ ಕೃತಜ್ಞತೆಗಳು.ಚುನಾವಣೆಯಲ್ಲಿ ನಾನು ಗೆಲುವು ಸಾಧಿಸದಿದ್ದರೂ, ನಿಮ್ಮೆಲ್ಲರ ಆತ್ಮೀಯ ಬೆಂಬಲಕ್ಕೆ ಚಿರಋಣಿ. ಚುನಾವಣೆ ಸಂದರ್ಭದಲ್ಲಿ ನೀವು ತೋರಿದ ಪ್ರೀತಿ ಮತ್ತು ಬೆಂಬಲವು ನನ್ನಲ್ಲಿ ಮತ್ತಷ್ಟು ಶಕ್ತಿಯ ಸಂಚಲನವನ್ನುಂಟು ಮಾಡಿದೆ. ಇದರಿಂದ ಸಮುದಾಯದ ಹಿತಕ್ಕೆ ಇನ್ನಷ್ಟು ದುಡಿಯುವ ಸಂಕಲ್ಪ ತೊಟ್ಟಿದ್ದೇನೆ.

ಇದೇ ವೇಳೆ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ನಮ್ಮ ನಾಯಕರಾದ ಶ್ರೀ ಎಸ್. ರಘುನಾಥ್ ಅವರು ಭರ್ಜರಿ ಗೆಲುವು ಸಾಧಿಸಿದ್ದು, ಅವರಿಗೆ ದಾವಣಗೆರೆ ಜಿಲ್ಲೆಯ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು.

ಚುನಾವಣೆ ಸಂದರ್ಭದಲ್ಲಿ ಪ್ರತ್ಯಕ್ಷ - ಪರೋಕ್ಷವಾಗಿ ಸಹಕಾರ ನೀಡಿದ ಪ್ರತಿಯೊಬ್ಬರನ್ನೂ ಸ್ಮರಿಸಿ, ಧನ್ಯವಾದ ಹೇಳಲಿಚ್ಛಿಸುತ್ತೇನೆ.



ಎನ್. ಆರ್. ನಾಗಭೂಷಣ್ ರಾವ್



## WANTED

| S.No | Posts | Qualification |
|---|---|---|
| 1. | TGT Teachers - All Subjects | BA/ BSc.BEd |
| 2. | PGT Teachers - All Subjects | MA/ MSc.BEd |
| 3. | HOSTEL - WARDENS | MA/ MSc.Bed |
| 4. | PE Teachers | B.PEd/ M.PEd |
| | B.com., M.com - Graduates | |

Note: Salary Above 30K. Based on Experience and Performance.

Description: Fluency in English, Passion for Teaching.

Contact: 9980629965, 6364870055.



ಯೋಗಿ ರಾಮ್

ಶಶಿ ಎಜುಕೇಶನಲ್ ಟ್ರಸ್ಟ್ (ರಿ)

## ಲಲಿತಾ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್

ಲೋಕಿಕೆರೆ ಮುಖ್ಯ ರಸ್ತೆ, ದಾವಣಗೆರೆ.

ಉಚಿತ ಬೇಸಿಗೆ ಶಿಬಿರ-2025 April 16th - May4th 20 Days

ಆತ್ಮೀಯ ಪೋಷಕರೇ / ವಿದ್ಯಾರ್ಥಿಗಳೇ

ದಿನಾಂಕ 16.4.2025 ಬುಧವಾರದಿಂದ ನಮ್ಮ ಲಲಿತಾ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ 'ಕನ್ನಡ ಕಲಿ', ವಿಶೇಷ ತರಬೇತಿ ಶಿಬಿರವನ್ನು ಪ್ರಾರಂಭಿಸುತ್ತಿದ್ದು, ನಮ್ಮ ಶಾಲೆಯಲ್ಲಿ ಓದುತ್ತಿರುವ ಹಾಗೂ ಬೇರೆ ಶಾಲೆಗಳ ಮಕ್ಕಳು ಸಹ ಇಲ್ಲಿ ಪಾಲ್ಗೊಂಡು ಕನ್ನಡ ಸ್ಪಷ್ಟ ಓದು, ಶುದ್ಧ ಬರಹ, ವ್ಯಾಕರಣ ಕಲಿಯಲು ಅವಕಾಶ ಕಲ್ಪಿಸಲಾಗಿದ್ದು, ಮಕ್ಕಳು ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ವಿನಂತಿಸಿಕೊಳ್ಳುತ್ತೇವೆ.

ಸೂಚನೆ: ಉಚಿತ
* ಈ 'ಕನ್ನಡ ಕಲಿಕಾ ಶಿಬಿರ'ಕ್ಕೆ ಯಾವುದೇ ಶುಲ್ಕವಿರುವುದಿಲ್ಲ.
* ಮೊದಲು ಬಂದ ಕೇವಲ 60 ವಿದ್ಯಾರ್ಥಿಗಳಿಗೆ ಮಾತ್ರ
* ಸಮಯ: ಬೆಳಿಗ್ಗೆ 10-30 am ರಿಂದ 12-30 pm

ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ. 9901911207/9606490785



## ಭಾವಪೂರ್ಣ ಶ್ರದ್ಧಾಂಜಲಿ



ಅಮರಾವತಿ ಗ್ರಾಮದ ಹಿರಿಯರಾದ

ಶ್ರೀ ಅಮರಾವತಿ ಕರೂರು ಹಾಲಪ್ಪನವರು

ದಿನಾಂಕ 13.04.2025 ರಂದು ದೈವಾಧೀನರಾಗಿದ್ದು, ಮೃತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಪರಮೇಶ್ವರಪ್ಪನವರು. ಮಾಜಿ ಪ್ರಧಾನರು ಅಮರಾವತಿ, ಓಂ ಸಾಯಿ ಶ್ರೀ ಬಸವ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಅಮರಾವತಿ ಗ್ರಾಮದ ಕರೂರು ಹಂಚಿನ ಮನೆ ಸಹೋದರರು, ಮಕ್ಕಳು, ಮೊಮ್ಮಕ್ಕಳು ಅಮರಾವತಿ.



ssims SPARSH CENTRE FOR ACCIDENTS BONE & JOINT CARE

## ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು

ಪ್ರತೀ ಹದಿನೈದು ದಿನಗಳಿಗೊಮ್ಮೆ

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**

D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)

ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 17ನೇ ಏಪ್ರಿಲ್ 2025 । ಸಮಯ: ಬೆಳಿಗ್ಗೆ 9:00 ರಿಂದ ಮಧ್ಯಾಹ್ನ 1:30 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ ಶ್ರೀ ವಿನಾಯಕ ಎಜುಕೇಶನ್ ಟ್ರಸ್ಟ್ (ರಿ)

## ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು, ದಾವಣಗೆರೆ

## ವಿದ್ವತ್ ಮೆಡಿಕಲ್ ಮತ್ತು ಐಐಟಿ ಅಕಾಡೆಮಿ

## VIDHVATH MEDICAL & IIT ACADEMY

# 2394/24, SRI NARAYANA GURU KRUPA, SS LAYOUT, 'A' BLOCK, 10th CROSS, DAVANGERE - 577004

JNANAM | PARAM | BALAM VIDHVATH EDUCATION TRUST (R.)

### Hearty congratulations to the VIDHVATH Toppers



SCIENCE TOPPER 1ST RANK

M VINAYAKA 577

| Name | Marks |
|---|---|
| PRAJWAL S P | 574 |
| SANJANA B | 573 |
| CHANDRASHEKHARA S P | 571 |
| BHOOMIKA J P | 570 |
| SANDHYA G | 568 |
| SHANKARAMURTHY I S | 568 |
| YASHASVI R | 566 |
| SPOORTHI | 565 |
| SHREYAS H M | 563 |
| BHOOMIKA M | 562 |
| RAFIYA ANJUM D B | 561 |
| SANJANA D | 561 |
| NETRAVATHI K | 559 |
| ANANYA GOPAL SHET | 557 |
| PUNITH S | 555 |
| RAKSHITHA C R | 552 |
| RANJAN S D | 549 |
| SACHIN B NITTUR | 549 |
| KHAJABI | 548 |
| RAHUL UMESH HADIMANI | 548 |
| ABHISHEK T M | 546 |
| N R APEKSHA | 546 |
| AKASH K V | 545 |
| KIRAN N | 545 |
| BHUVAN H R | 544 |
| MADHUSUDHANA B H | 541 |
| VAISHNAVI R KAMBALI | 538 |
| BASAVARAJA Y N | 536 |
| NARENDRA M | 535 |
| NANDINI T | 534 |
| SUMAIYA | 534 |
| SUPRIYA M | 531 |
| ANKITHA M KANAVALLI | 528 |
| SUSHMA S ANGADI | 526 |
| SHIVANI A S | 525 |
| AMULYA S K | 524 |
| VIKAS N | 521 |
| GANESH J | 519 |
| AISHWARYA V S | 518 |
| NITHYASHRI J DOIJODE | 517 |
| PREETHI O | 517 |
| H M PRIYANKA | 516 |
| SPOORTHI B | 516 |
| NAMRATHA S M | 515 |
| RISHITHA G | 514 |
| MITHALI C S | 513 |
| NANDITHA M J | 512 |
| KARTHIKESHWARA N V | 511 |
| POORVI HATTIMATTUR | 511 |
| PRIYA M B | 511 |
| RAGHAVENDRA K R | 509 |
| T M POORNIMA | 509 |
| ABHILASH S | 507 |
| CHETHAN CHIMPIGARA | 507 |
| SANKETH HIREMATH | 507 |
| PRAVEEN KUMAR M P | 506 |
| RAKSHA S | 506 |
| THANUSHREE G A | 506 |
| SHASHIKALA T | 505 |
| SYED MALIK SHA QADRI K | 505 |
| SRIRAKSHA B | 504 |
| MANOJ S | 502 |
| NAMRATHA R S | 502 |
| SIDDESHKUMAR H H | 502 |
| AISHWARYA L | 501 |
| POORNACHANDRA K S | 500 |
| VISHALA BIDARAKATTI | 500 |

EXCELLENCE IN
• NEET • JEE • K-CET • NDA
• JIPMER • AIIMS • AFMC

DISTINCTION: 51
FIRST CLASS: 138

ABOVE 95% : 08
ABOVE 90% : 28

100/100
MATHEMATICS : 08
BIOLOGY: 01 COMP SCIENCE: 01

Registration OPEN for 1ST PU 2025-26

College Science Result 100%
Hostel Result 100%

Contact us: 9448391963 • 9113675955 • 9964225169 • 9740700825


ರಾಷ್ಟ್ರಕ್ಕೆ
ಸಮಾನತೆಯ ಗ್ಯಾರಂಟಿ
ಕೊಟ್ಟ ಹರಿಕಾರರಿಗೆ
ಗ್ಯಾರಂಟಿ ಸರ್ಕಾರದ
ಅನಂತ ಅನಂತ ನಮನಗಳು
134ನೇ ಜನ್ಮದಿನಾಚರಣೆ
ಸಂವಿಧಾನ ಶಿಲ್ಪಿ, ಮಹಾ ಮಾನವತಾವಾದಿ, ಭಾರತ ರತ್ನ
ಡಾ. ಬಿ.ಆರ್. ಅಂಬೇಡ್ಕರ್ ರವರ
ಪ್ರತಿಮೆಗೆ ಮಾಲಾರ್ಪಣೆ
ಏಪ್ರಿಲ್ 14, 2025 ಸೋಮವಾರ, ಬೆಳಿಗ್ಗೆ 10.30 ಗಂಟೆಗೆ
ವಿಧಾನಸೌಧದ ಪೂರ್ವದ್ವಾರ, ಬೆಂಗಳೂರು
ವೇದಿಕೆ ಕಾರ್ಯಕ್ರಮ
ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ, ಪೂರ್ವದ್ವಾರ, ಬೆಂಗಳೂರು
ಸಮಯ - ಬೆಳಿಗ್ಗೆ 10.45 ಗಂಟೆಗೆ
ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು,
ಸಂವಿಧಾನ ಮೌಲ್ಯಗಳನ್ನುದ್ದೇಶಿಸಿ ಮಾತನಾಡುತ್ತಿರುವುದು.
ನಮ್ಮ ಕರ್ನಾಟಕ
ಗ್ಯಾರಂಟಿ ಕರ್ನಾಟಕ
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ
10kg
ಗೃಹಜ್ಯೋತಿ
ಪ್ರತಿ ಮನೆಗೆ 200
ಗೃಹಲಕ್ಷ್ಮಿ
₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ₹1500
"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮಾಲೀಕತ್ವದ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ಜಾತಿಗಣತಿ ; ಆತುರದ ನಿರ್ಧಾರವಿಲ್ಲ



ಬೆಂಗಳೂರು, ಏ. 13 - ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷಾ ವರದಿಯ ಬಗ್ಗೆ ರಾಜ್ಯ ಸರ್ಕಾರ ಆತುರದ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಈ ವರದಿಯನ್ನು ಜಾತಿಗಣತಿ ಎಂದು ಕರೆಯಲಾಗುತ್ತಿದ್ದು, ಇತ್ತೀಚೆಗೆ ಸಂಪುಟದಲ್ಲಿ ಮಂಡಿಸಲಾಗಿತ್ತು.

ಪತ್ರಕರ್ತರೊಂದಿಗೆ ಮಾತನಾಡಿದ ಶಿವಕುಮಾರ್, ಸಂಪುಟವು ಈ ವರದಿ ಪರಿಶೀಲಿಸಿ, ಚರ್ಚಿಸಲಿದೆ. ಸತ್ಯಾಂಶದ ಆಧಾರದ ಮೇಲೆ ಎಲ್ಲರಿಗೂ ನ್ಯಾಯ ಒದಗಿಸಲಿದೆ ಎಂದು ಹೇಳಿದ್ದಾರೆ.

ಕಳೆದ ಶುಕ್ರವಾರ ಸಮೀಕ್ಷಾ ವರದಿಯನ್ನು ಸಂಪುಟದ ಮುಂದೆ ಮಂಡಿಸಲಾಗಿತ್ತು. ಈ ಕುರಿತು ಚರ್ಚಿಸಲು ಏಪ್ರಿಲ್ 17 ರಂದು ವಿಶೇಷ ಸಂಪುಟ ಸಭೆ ಕರೆಯಲಾಗಿದೆ.

ನಾನು ಇನ್ನೂ ವರದಿ ಪರಿಶೀಲಿಸಿಲ್ಲ. ಈ ಕುರಿತು ಸಂಪುಟದಲ್ಲಿ ಚರ್ಚಿಸಬೇಕಿದೆ. ವಿಧಾನಸಭೆಯಲ್ಲಿಯೂ ಚರ್ಚೆ ನಡೆಸಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆತುರದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಶಿವಕುಮಾರ್ ತಿಳಿಸಿದ್ದಾರೆ.

ಜಾತಿಗಣತಿಯ ಬಗ್ಗೆ ಕೆಲವರು ರಾಜಕೀಯ ಹೇಳಿಕೆಗಳನ್ನು ನೀಡುತ್ತಿದ್ದಾರೆ. ನಾವು ಸತ್ಯಾಂಶ ಅರ್ಥೈಸಿಕೊಂಡು ಎಲ್ಲರಿಗೂ ನ್ಯಾಯ ಒದಗಿಸುವ ಗುರಿ ಹೊಂದಿದ್ದೇವೆ ಎಂದು ಶಿವಕುಮಾರ್ ಹೇಳಿದ್ದಾರೆ.

ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ನನಗೆ ವರದಿಯ ವಿವರಗಳು ತಿಳಿದಿಲ್ಲ. ಆದ್ದರಿಂದ, ಈ ಕುರಿತು ಯಾವುದೇ ಹೇಳಿಕೆ ನೀಡುವುದಿಲ್ಲ ಎಂದು ತಿಳಿಸಿದ್ದಾರೆ. ಒಬಿಸಿ ವರ್ಗಕ್ಕೆ ಇರುವ ಮೀಸಲಾತಿಯನ್ನು ಶೇ. 32 ರಿಂದ ಶೇ. 51 ಕ್ಕೆ ಹೆಚ್ಚಿಸುವಂತೆ ವರದಿಯಲ್ಲಿ ಶಿಫಾರಸ್ಸು ಮಾಡಲಾಗಿದೆ.

# ಬೇಡವೆಂದರೂ ಮಾರುಕಟ್ಟೆಗೆ ಬರಲಿದೆ ಕೃತಕ ಮಾಂಸ

## ವೈದ್ಯಕೀಯ ಸಂಶೋಧನೆಯಿಂದ ಕೃತಕ ಮಾಂಸಕ್ಕಿದೆ ಬಲ

ನವದೆಹಲಿ, ಏ.13 - ಕೃತಕವಾಗಿ ಉತ್ಪಾದಿಸಿದ ಮಾಂಸವು ಮಾರುಕಟ್ಟೆಗೆ ಪ್ರವೇಶಿಸುವ ಬಗ್ಗೆ ಸಾರ್ವಜನಿಕರಲ್ಲಿ ಪರ ಮತ್ತು ವಿರೋಧದ ಅಭಿಪ್ರಾಯಗಳಿವೆ. ಕೃತಕ ಮಾಂಸವು ಪರಿಸರ ಸಂರಕ್ಷಣೆಗೆ ಸಹಾಯಕವಾಗಿದೆ ಮತ್ತು ಪ್ರಾಣಿ ಹಿಂಸೆ ತಡೆಯುತ್ತದೆ ಎಂದು ಕೆಲವರು ವಾದಿಸುತ್ತಾರೆ. ಆದರೆ, ಇನ್ನೂ ಕೆಲವರು ಇದನ್ನು ಅನೈಸರ್ಗಿಕವೆಂದು ಪರಿಗಣಿಸಿ, ಆರೋಗ್ಯಕ್ಕೆ ಅಪಾಯಕಾರಿಯಾಗಬಹುದು ಎಂದು ಆತಂಕ ವ್ಯಕ್ತಪಡಿಸುತ್ತಾರೆ. ಈ ಎರಡೂ ಅಭಿಪ್ರಾಯಗಳ ಹೊರತಾಗಿಯೂ, ಕೃತಕ ಮಾಂಸ ಉತ್ಪಾದನೆಯ ತಂತ್ರಜ್ಞಾನವು ಕ್ಷಿಪ್ರವಾಗಿ ಬೆಳೆಯುತ್ತಿದೆ.



ಕೃತಕ ಮಾಂಸವನ್ನು ಜೀವಂತ ಅಂಗಾಂಶಗಳಿಂದ ಪ್ರಯೋಗಾಲಯದಲ್ಲಿ ಬೆಳೆಸಲಾಗುತ್ತದೆ. ಈ ತಂತ್ರಜ್ಞಾನವು ಮಾಂಸವನ್ನು ಗಾಢವಾದ, ಉತ್ತಮ ಗುಣಮಟ್ಟದ ರೂಪದಲ್ಲಿ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ವೈದ್ಯಕೀಯ ಸಂಶೋಧನೆಯ ಮೇಲೂ ಇದರ ಪರಿಣಾಮ ಗಮನಾರ್ಹವಾಗಿದೆ.

ಕೃತಕ ಮಾಂಸವು ಒಂದು ರೀತಿಯ ವಿನ್ಯಾಸಗೊಳಿಸಿದ ಅಂಗಾಂಶವಾಗಿದ್ದು, ಪ್ರಾಣಿಗಳಲ್ಲಿ ಮಾಂಸ ಬೆಳವಣಿಗೆಯಾಗುವ ರೀತಿಯನ್ನೇ ಅನುಕರಿಸುತ್ತದೆ. ಪ್ರಾಣಿಗಳ ಜೀವಕೋಶಗಳ ವಿಭಜನೆಯ ಮೂಲಕ ಮಾಂಸ ರೂಪುಗೊಳ್ಳುವಂತೆ, ಪ್ರಯೋಗಾಲಯದಲ್ಲಿಯೂ ಜೀವಕೋಶಗಳು, ಕೊಬ್ಬಿನ ಕೋಶಗಳು ಮತ್ತು ಕೊಲಾಜಿನ್‌ನ ಸಂಯೋಜನೆಯಿಂದ ಮಾಂಸವನ್ನು ರೂಪಿಸಲಾಗುತ್ತದೆ.

ಈ ಅಂಶಗಳು ಸಮತೋಲನಗೊಂಡಾಗ, ಮಾಂಸಕ್ಕೆ ರುಚಿ, ಬಣ್ಣ ಮತ್ತು ರಚನೆ ಲಭ್ಯವಾಗುತ್ತದೆ. ಈ ರೀತಿಯಲ್ಲಿ ಉತ್ಪಾದಿಸಲಾದ ಮಾಂಸವನ್ನು 'ಕೃತಕ ಮಾಂಸ' ಅಥವಾ 'ಮಾಂಸ ಕೃಷಿ' ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಈ ತಂತ್ರಜ್ಞಾನದ ಪ್ರಮುಖ ಲಾಭವೆಂದರೆ, ಪ್ರಾಣಿಗಳ ವಧೆಯನ್ನು ತಪ್ಪಿಸುವುದು ಮತ್ತು ಹಸಿರುಮನೆ ಅನಿಲಗಳ ಹೊರಸೂಸುವಿಕೆಯನ್ನು ಕಡಿಮೆಗೊಳಿಸುವುದು.

ಆರಂಭದಲ್ಲಿ, ಈ ತಂತ್ರಜ್ಞಾನವನ್ನು ಅಂಗಾಂಶ ಕಸಿ, ಪುನರುತ್ಪಾದಕ ಔಷಧಿಗಳು ಮತ್ತು ಔಷಧೀಯ ಪರೀಕ್ಷೆಗಳಿಗಾಗಿ ಬಳಸಲಾಗಿತ್ತು. ಭವಿಷ್ಯದಲ್ಲಿ, ಈ ತಂತ್ರಜ್ಞಾನವನ್ನು ಬಳಸಿಕೊಂಡು ಕೃತಕವಾಗಿ ಲಿವರ್ ರೀತಿಯ ಅಂಗಗಳನ್ನು ರೂಪಿಸುವ ಸಾಧ್ಯತೆ ಇದೆ. ಅಪಘಾತಗಳಿಂದ ಅಥವಾ ಕ್ಯಾನ್ಸರ್ ಚಿಕಿತ್ಸೆಯಿಂದ ಹಾನಿಗೊಳಗಾದ ಅಂಗಾಂಶಗಳನ್ನು ಸರಿಪಡಿಸಲು ಇದು ಉಪಯುಕ್ತವಾಗಬಹುದು.

ಈ ಹಿಂದೆ, ಕೃತಕ ಮಾಂಸ ಉತ್ಪಾದನೆಯು ಸಂಕೀರ್ಣ ಮತ್ತು ಹೆಚ್ಚು ಸಮಯ ಬೇಕಾಗುವ ಪ್ರಕ್ರಿಯೆಯಾಗಿತ್ತು. ಪ್ರಾಣಿಗಳ ಮೇಲಿನ ಪ್ರಯೋಗಗಳು ಮತ್ತು ಫಲಿತಾಂಶಗಳ ವರ್ಷಗಟ್ಟಲೆ ಪರಿಶೀಲನೆ ಅಗತ್ಯವಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ, ಕಂಪ್ಯೂಟರ್ ಸಿಮ್ಯುಲೇಶನ್‌ಗಳ ಮೂಲಕ ಅಂಗಾಂಶಗಳನ್ನು ಬೆಳೆಸುವುದರಿಂದ ಈ ಪ್ರಕ್ರಿಯೆಯ ದಕ್ಷತೆ ಗಣನೀಯವಾಗಿ ಹೆಚ್ಚಿದೆ. ಇದರಿಂದ ಔಷಧೀಯ ಪರೀಕ್ಷೆಗಳಿಗಾಗಿ ಉತ್ಪಾದಿಸಲಾದ ಅಂಗಾಂಶಗಳು ಉತ್ತಮ ಫಲಿತಾಂಶಗಳನ್ನು ನೀಡುತ್ತಿವೆ ಮತ್ತು ಔಷಧ ಉತ್ಪಾದನೆಯ ವೆಚ್ಚವನ್ನು ಕಡಿಮೆಗೊಳಿಸಲು ಸಹಾಯಕವಾಗಿದೆ.

ಪ್ರಸ್ತುತ, 3ಡಿ ಬಯೋಪ್ರಿಂಟಿಂಗ್ ಮತ್ತು ಬಯೋರಿಯಾಕ್ಟರ್‌ಗಳ ವೆಚ್ಚ ಹೆಚ್ಚಾಗಿದೆ. ಆದರೆ, ಭವಿಷ್ಯದಲ್ಲಿ ಈ ತಂತ್ರಜ್ಞಾನದ ವೆಚ್ಚ ಕಡಿಮೆಯಾಗುವ ನಿರೀಕ್ಷೆಯಿದೆ. ತಂತ್ರಜ್ಞಾನದ ಸುಧಾರಣೆ ಮತ್ತು ಉತ್ಪಾದನಾ ವೆಚ್ಚ ಕಡಿಮೆಯಾದರೆ, ಕೃತಕ ಮಾಂಸವು ನೈಸರ್ಗಿಕ ಮಾಂಸದಂತೆಯೇ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಲಭ್ಯವಾಗಲಿದೆ ಎಂದು ಬ್ರಿಟನ್‌ನ ಓಪನ್ ಯೂನಿವರ್ಸಿಟಿಯ ಹಿರಿಯ ಜೇಮ್ಸ್ ಹೇಗ್ ತಿಳಿಸಿದ್ದಾರೆ.

ಕೃತಕವಾಗಿ ಉತ್ಪಾದಿಸಿದ ಮಾಂಸವು ರುಚಿ, ರಚನೆ ಮತ್ತು ಆರೋಗ್ಯದ ದೃಷ್ಟಿಯಿಂದ ನೈಸರ್ಗಿಕ ಮಾಂಸಕ್ಕಿಂತ ಯಾವುದೇ ರೀತಿಯಲ್ಲಿ ಕಡಿಮೆಯಿಲ್ಲ ಎಂದವರು ಹೇಳುತ್ತಾರೆ.

ಈಗಾಗಲೇ ಕೆಲವು ದೇಶಗಳು ಕೃತಕ ಮಾಂಸವನ್ನು ಮಾನವ ಸೇವನೆಗೆ ಅನುಮತಿಸಿವೆ. ಆದರೆ ಇನ್ನೂ ಕೆಲವು ದೇಶಗಳು ಇದನ್ನು ಶ್ವಾನಗಳ ಆಹಾರವಾಗಿ ಬಳಸಲು ಅನುಮತಿ ನೀಡಿವೆ.

ಕೃತಕ ಮಾಂಸ ಮತ್ತು ಕೃತಕ ಅಂಗಾಂಶಗಳ ಉತ್ಪಾದನೆಯು ಸಮಾನ ತಂತ್ರಜ್ಞಾನವನ್ನು ಆಧರಿಸಿದೆ ಮತ್ತು ಒಂದಕ್ಕೊಂದು ಪೂರಕವಾಗಿವೆ. ಈ ಎರಡೂ ಕ್ಷೇತ್ರಗಳು ಮುಂದುವರೆದಂತೆ, ಪ್ರಾಣಿಗಳ ವಧೆ ಮತ್ತು ಪ್ರಾಣಿಗಳ ಮೇಲಿನ ಪ್ರಯೋಗಗಳ ಅಗತ್ಯವು ಗಣನೀಯವಾಗಿ ಕಡಿಮೆಯಾಗಲಿದೆ.

ಮುಂದಿನ ಕೆಲವು ವರ್ಷಗಳಲ್ಲಿ, ಕಾರ್ಖಾನೆಗಳಲ್ಲಿ ಉತ್ಪಾದಿತ ಕೃತಕ ಮಾಂಸವು ಅಂಗಡಿಗಳಲ್ಲಿ ಮಾರಾಟಕ್ಕೆ ಲಭ್ಯವಾಗಲಿದೆ. ಇದನ್ನು ಖರೀದಿಸುವುದು ನಿಮ್ಮ ಆಯ್ಕೆಯಾದರೂ, ಈ ತಂತ್ರಜ್ಞಾನದಿಂದ ಉತ್ತಮ ಔಷಧಿಗಳು ಮತ್ತು ಕಸಿಗೆ ಲಭ್ಯವಾಗುವ ಕೃತಕ ಅಂಗಗಳು ಲಭ್ಯವಾಗಲಿವೆ ಎಂಬುದು ನಿಶ್ಚಿತ ಎಂದು ಜೇಮ್ಸ್ ಹೇಗ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಡಾ. ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಶಂಕುಸ್ಥಾಪನೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ಸರ್ಕ್ಯೂಟ್ ಹೌಸ್ ಪಕ್ಕ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಉದ್ಘಾಟಿಸುವರು. ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ.ಎಸ್. ಬಸವಂತಪ್ಪ, ಕೆ.ಅಬ್ದುಲ್ ಜಬ್ಬಾರ್, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ಬಂಜಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವನಾಯ್ಕ್, ದೂಡಾ ಅಧ್ಯಕ್ಷ ದಿನೇಶ್.ಕೆ.ಶೆಟ್ಟಿ, ಜಿಲ್ಲಾಧಿಕಾರಿ, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ ಬಿ. ಇಟ್ನಾಳ್, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ಕಾರ್ಯಕ್ರಮದಲ್ಲಿ ಭಾಗವಹಿಸುವರು.

## ಭಾನುವಳ್ಳಿಯಲ್ಲಿ ವೈಭವದ ಆಂಜನೇಯ ಸ್ವಾಮಿ ರಥೋತ್ಸವ



ಮಲೇಬೆನ್ನೂರು, ಏ.13- ಭಾನುವಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಇಂದು ಬೆಳಗ್ಗೆ ಗ್ರಾಮದ ವಿವಿಧ ದೇವರುಗಳ ಸಮ್ಮುಖದಲ್ಲಿ ವೈಭವದೊಂದಿಗೆ ಜರುಗಿತು. ರಥಕ್ಕೆ ಪೂಜೆ ಸಲ್ಲಿಸಿದ ಬಳಿಕ ಗೋವಿಂದ ಗೋವಿಂದಾ ಎಂಬ ಜಯಘೋಷದೊಂದಿಗೆ ಗ್ರಾಮಸ್ಥರು ರಥವನ್ನು ಎಳೆದು ಸಂಭ್ರಮಿಸಿದರು. ಡೊಳ್ಳು, ಹಲಗೆ ಸೇರಿದಂತೆ ವಿವಿಧ ವಾದ್ಯ ಮೇಳಗಳು ರಥೋತ್ಸವಕ್ಕೆ ಮೆರಗು ತಂದವು. ರಥೋತ್ಸವದ ವೇಳೆ ಭಕ್ತರು ರಥದ ಮೇಲೆ ಬಾಳೆ ಹಣ್ಣುಗಳನ್ನು ಎಸೆದು ಭಕ್ತಿ ಸಮರ್ಪಿಸಿದರು. ನಾಳೆ ಸೋಮವಾರ ಸಂಜೆ 5 ಗಂಟೆಗೆ ಭೂತ ಸೇವೆ ನಡೆಯಲಿದೆ.

## ಜಗಳೂರು : ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳಿಗೆ ಅರ್ಜಿ

ಜಗಳೂರು, ಏ. 13- ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 14 ಅಂಗನವಾಡಿ ಕಾರ್ಯಕರ್ತೆಯರು, 1 ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಗೂ 37 ಅಂಗನವಾಡಿ ಸಹಾಯಕಿಯರ ಹುದ್ದೆಗಳ ನೇಮಕಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 25 ಕೊನೆಯ ದಿನವಾಗಿದೆ. ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್ https:/karnemakaone.kar.nic.in/abcd/ ನಲ್ಲಿ ಅರ್ಜಿ ಸಲ್ಲಿಸಬಹುದು. ಈ ಹಿಂದೆ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಎಲ್ಲರೂ ಹೊಸದಾಗಿ ಅರ್ಜಿ ಸಲ್ಲಿಸಬೇಕೆಂದು ಜಗಳೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದ್ದಾರೆ.

## ಏರ್‌ಫೋರ್ಸ್ ಮಾಜಿ ಸೈನಿಕರಿಗೆ ಶಿಬಿರ

ದಾವಣಗೆರೆ, ಏ. 13 - ರಾಜ್ಯ ಏರ್‌ಫೋರ್ಸ್ ಅಸೋಸಿಯೇಷನ್ ಶಾಖೆಯಿಂದ ಇದೇ ದಿನಾಂಕ 18 ಮತ್ತು 19 ರಂದು ಶಿವಮೊಗ್ಗದ ನೌಕರರ ಸಂಘದ ಕಟ್ಟಡದಲ್ಲಿ ವಾಯುಪಡೆ ಮಾಜಿ ಸೈನಿಕರಿಗೆ ಸ್ಪರ್ಶ್ ಸಹಾಯಕ ಶಿಬಿರ ಹಮ್ಮಿಕೊಳ್ಳಲಾಗಿದೆ. .

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-23513319, 23411081 ಹಾಗೂ ಇಮೇಲ್ afa.bangalore@gmail.com/ afakarnataka@gmail.com ನ್ನು ಸಂಪರ್ಕಿಸಬಹುದು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕ ಡಾ.ಸಿ.ಎ.ಹಿರೇಮಠ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕಾಂಗ್ರೆಸ್‌ನಿಂದ ಅಂಬೇಡ್ಕರ್ ಜಯಂತಿ

ಜಿಲ್ಲಾ ಕಾಂಗ್ರೆಸ್ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮದಿನವನ್ನು ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

## ಕಬೀರ್ ಬಂಧನ

(1ನೇ ಪುಟದಿಂದ) ಈ ವಿಡಿಯೋ ಆಧರಿಸಿ ಅಹಮ್ಮದ್ ಕಬೀರ್ ಖಾನ್ ಮತ್ತು ಇತರರ ವಿರುದ್ಧ ಆಜಾದ್ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಪ್ರಕರಣ ದಾಖಲಾದ ನಂತರ ಅಹಮ್ಮದ್ ಕಬೀರ್ ಖಾನ್ ತಲೆಮರೆಸಿಕೊಂಡಿದ್ದ.

ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರ ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚಿಸಿ, ಆರೋಪಿ ಪತ್ತೆಗೆ ಕಾರ್ಯಾಚರಣೆ ನಡೆಸಲಾಗಿತ್ತು. ಆರೋಪಿ ಅಹಮ್ಮದ್ ಕಬೀರ್ ಖಾನ್ ರಾಜಸ್ಥಾನದ ಅಜ್ಮೀರ್‌ನಲ್ಲಿರುವ ಬಗ್ಗೆ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಅಲ್ಲಿಗೆ ತೆರಳಿ ಆತನನ್ನು ಬಂಧಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಆರೋಪಿ ಬಂಧನದಲ್ಲಿ ಯಶಸ್ವಿಯಾದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಪ್ರಶಂಸಿಸಿದ್ದಾರೆ.

## ಜಿಲ್ಲಾ ಪ್ರತಿನಿಧಿಯಾಗಿ ಆನಂದತೀರ್ಥಾಚಾರ್

(1ನೇ ಪುಟದಿಂದ) ರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಒಟ್ಟು 1256 ಮತದಾರರ ಪೈಕಿ ಇಂದಿನ ಚುನಾವಣೆಯಲ್ಲಿ 885 ಜನರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಈ ಪೈಕಿ 33 ಮತಗಳು ತಿರಸ್ಕೃತಗೊಂಡಿವೆ. ಇದೇ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಎಸ್. ರಘುನಾಥ್ ಅವರು ಅತ್ಯಧಿಕ ಮತಗಳನ್ನು ಗಳಿಸಿ ಆಯ್ಕೆಯಾಗಿದ್ದಾರೆ.

ಸ್ಥಳೀಯ ಪಿ.ಜೆ. ಬಡಾವಣೆಯಲ್ಲಿರುವ ಬ್ರಾಹ್ಮಣ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಚುನಾವಣೆ ಏರ್ಪಾಡಾಗಿತ್ತು. ಬಿ. ಸತೀಶ್ ಚುನಾವಣಾಧಿಕಾರಿಯಾಗಿದ್ದರು.

## ಆಧುನಿಕ ಕೋಳಿ ಸಾಕಾಣಿಕೆ ತರಬೇತಿ

ದಾವಣಗೆರೆ, ಏ. 13- ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಆಧುನಿಕ ಕೋಳಿ ಸಾಕಾಣಿಕೆ ತರಬೇತಿಯು ನಾಡಿದ್ದು ದಿನಾಂಕ 15 ಮತ್ತು 16 ರಂದು ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ನಗರದಲ್ಲಿಂದು ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ

ದಾವಣಗೆರೆ, ಏ.13- ಕರ್ನಾಟಕ ಭೀಮ್ ಸೇನೆಯ ವತಿಯಿಂದ 134ನೇ ಅಂಬೇಡ್ಕರ್ ಜಯಂತಿ ನಿಮಿತ್ತ ನಾಳೆ ದಿನಾಂಕ 14ರ ಸೋಮವಾರ ಬೆಳಿಗ್ಗೆ 8.30ಕ್ಕೆ ಪಥ ಸಂಚಲನ ಹಾಗೂ ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆ ನಡೆಯಲಿದೆ ಎಂದು ಸೇನೆಯ ಜಿಲ್ಲಾಧ್ಯಕ್ಷ ಆರ್. ಸೂರ್ಯಪ್ರಕಾಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲಾ-ಕಾಲೇಜಿನ ವಿದ್ಯಾರ್ಥಿಗಳ ಸಹ ಭಾಗಿತ್ವದಲ್ಲಿ ಪಥ ಸಂಚಲನ ನಡೆಯಲಿದ್ದು, ಪಾಲಿಕೆ ಮುಂಭಾಗದಿಂದ ಪ್ರಾರಂಭವಾಗುವ ಪಥಸಂಚಲನವು ಗಾಂಧಿ ವೃತ್ತದ ಮುಖೇನ ಜಯದೇವ ವೃತ್ತ ಅಲ್ಲಿಂದ ಅಂಬೇಡ್ಕರ್ ವೃತ್ತ ತಲುಪಲಿದೆ ಎಂದರು.

ಸಂವಿಧಾನದ ಮೂಲಕ ಧಾರ್ಮಿಕ ಸ್ವಾತಂತ್ರ್ಯ ಕಲ್ಪಿಸಿದ ಅಂಬೇಡ್ಕರ್ ಭಾವಚಿತ್ರವನ್ನು ಎಲ್ಲಾ ಸಮುದಾಯದ ಮಠ, ಮಂದಿರ, ಮಸೀದಿ ಹಾಗೂ ಚರ್ಚ್‌ಗಳಲ್ಲಿ ಹಾಕಲು ಸೂಚನೆ ನೀಡುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

ಸರ್ಕಾರಿ ನೌಕರರು ಜಯಂತಿ ಕಾರ್ಯಕ್ರಮಕ್ಕೆ ಗೈರು ಹಾಜರಾದಲ್ಲಿ ಅಂತವರ ಹೆಸರುಗಳನ್ನು ಪಟ್ಟಿ ಮಾಡಿ 6 ತಿಂಗಳ ವೇತನ ಕಡಿತಗೊಳಿಸುವಂತೆ ಅವರು ಸರ್ಕಾರಕ್ಕೆ ಆಗ್ರಹಿಸಿದರು.

ಈ ವೇಳೆ ಭೀಮ್ ಸೇನೆಯ ಎನ್. ಸಂತೋಷ್, ಮೈಲಾರಿ, ಮಂಜಾನಾಯ್ಕ್ ಸುದ್ದಿಗೋಷ್ಠಿಯಲ್ಲಿದ್ದರು.

## ಕದಳಿ ವೇದಿಕೆಯಿಂದ 16 ರಂದು 'ಚೈತ್ರದ ಚೈತನ್ಯ - ಅಕ್ಕ' ವಚನ ಗಾಯನ

ದಾವಣಗೆರೆ, ಏ. 13- ಕದಳಿ ಮಹಿಳಾ ವೇದಿಕೆಯ ವತಿಯಿಂದ ಅಕ್ಕಮಹಾದೇವಿ ಜಯಂತಿ ಪ್ರಯುಕ್ತ ಇದೇ ದಿನಾಂಕ 16ರ ಬುಧವಾರ ಚೈತ್ರದ ಚೈತನ್ಯ -ಅಕ್ಕ ವಚನ ಗಾಯನಗಳ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಯಶಾ ದಿನೇಶ್ ಅವರು ಅಕ್ಕನ 5 ವಚನಗಳ ಗಾಯನ ತರಬೇತಿ ನೀಡಲಿದ್ದಾರೆ. ಕದಳಿ ವೇದಿಕೆಯಿಂದ ಇದೇ ದಿನಾಂಕ 17ರಂದು ಆಚರಿಸಲಾಗುವ ಅಕ್ಕಮಹಾದೇವಿ ಜಂಯತಿ ಕಾರ್ಯಕ್ರಮದಲ್ಲಿ ಶಿಬಿರಾ ರ್ಥಿಗಳಿಂದ ಅವರು ಕಲಿತ ವಚನಗಳ ಗಾಯನವನ್ನು ಹಮ್ಮಿಕೊಳ್ಳಲಾಗಿದೆ.

ಶಿಬಿರವು ಇದೇ ದಿನಾಂಕ 16ರ ಬೆಳಿಗ್ಗೆ 11 ರಿಂದ 1.30ರವರೆಗೆ ನಡೆಯಲಿದ್ದು, ದಿನಾಂಕ 15ರೊಳಗೆ ನೋಂದಣಿಗೆ ವಸಂತ ಕೆ.ಆರ್. (86602 62270), ರತ್ನ ಸಿ. ರೆಡ್ಡಿ (88619 55130), ಪೂರ್ಣಿಮಾ (99869 15292) ಅವರುಗಳನ್ನು ಸಂಪರ್ಕಿಸಬಹುದಾಗಿದೆ.

## ಮಲೇಬೆನ್ನೂರು : ಇಂದು ಅಂಬೇಡ್ಕರ್, ಜಗಜೀವನ್ ರಾಮ್ ಜಯಂತಿ, ಮೆರವಣಿಗೆ

ಎ.ಕೆ.ಕಾಲೋನಿಯಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಮತ್ತು ಮಾಜಿ ಉಪಪ್ರಧಾನಿ ಬಾಬು ಜಗಜೀವನ್ ರಾಮ್ ಅವರ 118ನೇ ಜಯಂತಿ ಆಚರಣೆ ಮತ್ತು ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಬಳಿಕ ಪಟ್ಟಣದ ರಾಜ ಬೀದಿಗಳಲ್ಲಿ ಬೃಹತ್ ಮೆರವಣಿಗೆ ಏರ್ಪಡಿಸಲಾಗಿದೆ ಎಂದು ಎ.ಕೆ. ಲೋಕೇಶ್ ತಿಳಿಸಿದ್ದಾರೆ.

**ಹಾಲು-ಹಣ್ಣು ವಿತರಣೆ :** ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಅವರ ಜಯಂತಿ ಅಂಗವಾಗಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ರೋಗಿಗಳಿಗೆ ಹಾಲು-ಹಣ್ಣು, ಬ್ರೆಡ್ ವಿತರಿಸಲಾಗುವುದೆಂದು ಎ.ಕೆ.ಪ್ರಕಾಶ್ ತಿಳಿಸಿದ್ದಾರೆ.

## ಸರ್ವೋತ್ತಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಏ.13 - ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿ, ನೌಕರರಿಗೆ ರಾಜ್ಯ ಸರ್ಕಾರದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಆಯ್ಕೆ ಮಾಡಲು ನಾಮನಿರ್ದೇಶನಗಳನ್ನು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಿಂದ ಎರಡು ಹೆಸರುಗಳನ್ನು ರಾಜ್ಯ ಮಟ್ಟದ ಪ್ರಶಸ್ತಿಗೆ ಶಿಫಾರಸ್ಸು ಮಾಡಬೇಕಾಗಿದ್ದು, ಅದರಂತೆ ಜಿಲ್ಲಾ ಮಟ್ಟದಲ್ಲಿ 10 ಅಧಿಕಾರಿ, ನೌಕರರಿಗೆ ಈ ಪ್ರಶಸ್ತಿಯನ್ನು ಪಡೆಯಲು ಅವಕಾಶವಿದೆ. ಸರ್ವೋತ್ತಮ ಸೇವಾ ಪ್ರಶಸ್ತಿಯ 2 ಹಂತದ ಪ್ರಶಸ್ತಿಗಳಿಗೂ ಅರ್ಜಿ ಸಲ್ಲಿಸಬಹುದು. ಪ್ರತಿ ಹಂತಕ್ಕೂ ಪ್ರತ್ಯೇಕವಾಗಿ ತಮ್ಮ ನಾಮನಿರ್ದೇಶನಗಳನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ನಾಳೆ ದಿನಾಂಕ 14 ಕೊನೆಯ ದಿನವಾಗಿರುತ್ತದೆ. ವೆಬ್ ಸೈಟ್ http://sarvothamaawards.karnataka.gov.in ಅಥವಾ http://dparar.karnataka.gov.in ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು 'ವಸಂತ- ಸಂಭ್ರಮ'

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಂದು ಸಂಜೆ 4 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಯುಗಾದಿ ಪ್ರಯುಕ್ತ 'ವಸಂತ ಸಂಭ್ರಮ' ಕವಿಗೋಷ್ಠಿ ಆಯೋಜಿಸಲಾಗಿದೆ. ಕಸಾಪ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಜಿ.ಎಚ್. ರಾಜಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕವಯತ್ರಿ ಡಾ.ಪಿ.ವೀಣಾ, ಸುನಿತಾ ಪ್ರಕಾಶ್, ಅಣಬೇರು ತಾರೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

## ನಗರದ ಕೆಎಸ್ಸಾರ್ಟಿಸಿಯಲ್ಲಿ ಇಂದು ಅಂಬೇಡ್ಕರ್, ಬಾಬೂಜಿ ಜಯಂತಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಪ.ಜಾತಿ, ಪ.ಪಂಗಡ ಎಂಪ್ಲಾಯೀಸ್ ಯೂನಿಯನ್ ದಾವಣಗೆರೆ ವಿಭಾಗದ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ಅಂಬೇಡ್ಕರ್ ಅವರ 134 ನೇ ಹಾಗೂ 118 ನೇ ಬಾಬು ಜಗಜೀವನ ರಾಂ ಜಯಂತಿ, ಗ್ರಂಥಾಲಯ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಕೆಎಸ್‌ಆರ್‌ಟಿಸಿ ರಾಜ್ಯ ವಿಭಾಗೀಯ ನಿಯಂತ್ರಣಾಧಿಕಾರಿ ಕಿರಣಕುಮಾರ್ ಎಫ್. ಬಸಾಪುರ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ಕೆ.ಎಸ್. ಬಸವಂತಪ್ಪ, ಬಿ. ದೇವೇಂದ್ರಪ್ಪ, ಎಲ್.ಎಂ.ಹೆಚ್. ಸಾಗರ್, ಕಣ್ಣಾಳ್ ಅಂಜಿನಪ್ಪ, ಡಿ. ಫಕೃದ್ದೀನ್, ವಿ.ಹೆಚ್. ಜಗದೀಶ, ಆರ್.ರೇಖಾ, ರಾಜಶೇಖರ್ ಟಿ. ಕುಂಬಾರ್, ಕೆ.ಹೆಚ್. ನಾಗರಾಜ್, ಚಲುವೆಗೌಡ, ಟಿ.ಸಿ. ಕುಮಾರ್, ಕೆ. ಮಹೇಶ್ವರಪ್ಪ, ಹೆಚ್.ಮರುಳಸಿದ್ಧಪ್ಪ, ಜಿ.ಎಂ. ನೀತಾ ಮಂಜುನಾಥ್,ಸಿ. ಚಂದ್ರಶೇಖರ್ ಮತ್ತಿತರರು ಭಾಗವಹಿಸಲಿದ್ದಾರೆ. ಸಹಾಯಕ ಕಾನೂನು ಅಧಿಕಾರಿ ವೀಣಾ ಕುಮಾರಿ ಉಪನ್ಯಾಸ ನೀಡಲಿದ್ದಾರೆ.

## ಯರಗುಂಟೆ: ಇಂದು ಅಂಬೇಡ್ಕರ್ ಜಯಂತಿ

ಮಾನವ ಬಂಧುತ್ವ ವೇದಿಕೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಯರಗುಂಟೆ ಕರಿಯಮ್ಮ ದೇವಸ್ಥಾನದ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಗುವುದು.

ಪಾಲಿಕೆ ಮಾಜಿ ಸದಸ್ಯ ಉದಯಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಚಿಂತಕ ಎಸ್.ಯು. ಆಕಾಶ್, ಮಾನವ ಬಂಧುತ್ವ ವೇದಿಕೆ ವಿಭಾಗೀಯ ಸಂಚಾಲಕ ಶಿವಕುಮಾರ್ ಮಾಡಾಳ್ ಅಂಬೇಡ್ಕರ್ ಕುರಿತು ಉಪನ್ಯಾಸ ನೀಡಲಿದ್ದು, ದಲಿತ ಮುಖಂಡ ಎನ್. ನಾಗಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮುಖಂಡರಾದ ಬಿ.ಡಿ. ಬಸವರಾಜ್, ದೊಗ್ಗಳ್ಳಿ ಮಂಜಪ್ಪ, ತಿರುಕಪ್ಪರ ಮಂಜಪ್ಪ, ಕೊಟ್ರೇಶ್, ದೊಡ್ಡ ಪಕ್ಕೀರಪ್ಪರ ಶಿವಶಂಕರ್, ವೆಂಕಟೇಶ್ ತಳವಾರ್ ಮತ್ತಿತರರು ಭಾಗವಹಿಸಲಿದ್ದಾರೆ.

## ಜಗಳೂರಿನಲ್ಲಿಂದು ಅಂಬೇಡ್ಕರ್ ಜಯಂತಿ

ಜಗಳೂರು ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಇಂದು ನಡೆಯಲಿದೆ ಎಂದು ಕರ್ನಾಟಕ ರಾಜ್ಯ ಮಾದಿಗ ಸಮಾಜದ ಜಗಳೂರು ತಾಲ್ಲೂಕು ಘಟಕದ ಅಧ್ಯಕ್ಷ ಎಂ.ಬಸವರಾಜ್ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ಚಳ್ಳಕೆರೆ ರಸ್ತೆಯಿಂದ ಅಂಬೇಡ್ಕರ್ ವೃತ್ತದವರೆಗೆ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

## ನಗರದಲ್ಲಿ ಇಂದಿನಿಂದ ಬೇಸಿಗೆ ಶಿಬಿರ

ವಿದ್ಯಾನಗರ ಲಯನ್ಸ್ ಕ್ಲಬ್ ವತಿಯಿಂದ ಬೇಸಿಗೆ ಶಿಬಿರವನ್ನು ಮಾಂಟಿಸೂರಿ ಶಾಲೆಯಲ್ಲಿ ಇಂದಿನಿಂದ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಬ್ರೈನ್ ಯೋಗ, ಸ್ಪೀಡ್ ಮ್ಯಾತ್ಸ್ 1 ರಿಂದ 50ರ ವರೆಗೆ ಮಗ್ಗಿ, ಧ್ಯಾನ, ಏಕಾಗ್ರತೆ, ಕಲೆ, ಶ್ಲೋಕ, ಮುಂತಾದವುಗಳನ್ನು ಕಲಿಸುವರು. ವಿವರಕ್ಕೆ ಸಂಪರ್ಕಿಸಿ : 74 8316 2309 ಅಥವಾ 9980148289

## ನಗರದಲ್ಲಿ ಬೇಸಿಗೆ ತರಬೇತಿ ಶಿಬಿರ

ದಾವಣಗೆರೆ, ಏ.13- ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ಅಸೋಸಿಯೇಷನ್, ವಿದ್ಯಾನಗರದ ರೋಟರಿ ಕ್ಲಬ್ ಮತ್ತು ಶಿವಮೊಗ್ಗದ ನಳಂದ ಅಕಾಡೆಮಿ ಇವರ ಸಂಯುಕ್ತಾಶ್ರಯದಲ್ಲಿ ಬೇಸಿಗೆ ತರಬೇತಿ ಶಿಬಿರವನ್ನು ವಿದ್ಯಾನಗರದ ರೋಟರಿ ಕ್ಲಬ್‌ನಲ್ಲಿ ಆಯೋಜಿಸಲಾಗಿದೆ ಎಂದು ಶ್ರೀಪಾದ ಹೆಗಡೆ (98809 03417), ಸುರೇಶ್ ಜೈನ್ (9844468767) ತಿಳಿಸಿದ್ದಾರೆ.

# ಅಂದನೂರು ಚಿಟ್ಸ್‌ನ ನೂತನ ಕಚೇರಿ ಉದ್ಘಾಟನೆ






ದಾವಣಗೆರೆ, ಏ. 13- ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ಅಮೃತ ವಿದ್ಯಾಲಯಂ ಶಾಲಾ ಹತ್ತಿರದಲ್ಲಿ ಅಂದನೂರು ರಾಜೇಶ್ ಅವರ ಅಂದನೂರು ಚಿಟ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ನೂತನ ಕಚೇರಿಯ ಉದ್ಘಾಟನಾ ಸಮಾರಂಭವು ಮೊನ್ನೆ ನಡೆಯಿತು.

ಅಂದನೂರು ಚಿಟ್ಸ್ ಪ್ರೈವೇಟ್ ಲಿಮಿಟೆಡ್‌ನ ನೂತನ ಕಂಪನಿಯನ್ನು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸಿದರು.

ಅಂದನೂರು ಚಿಟ್ಸ್ ಕಚೇರಿ ಸ್ಥಳಾಂತರದ ಉದ್ಘಾಟನೆಯನ್ನು ಜಿಲ್ಲಾ ಚೀಟಿನಿಧಿ ಮತ್ತು ಸಹಕಾರ ಸಂಘಗಳ ಉಪನಿಬಂಧಕರು ಮಧು ಶ್ರೀನಿವಾಸ ಟಿ. ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಚಿಟ್‌ಫಂಡ್ಸ್ ಅಸೋಸಿಯೇಷನ್ (ಬೆಂಗಳೂರು) ನ ಟಿ.ಸಿ. ವಿಜಯಕುಮಾರ್, ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಬಿ.ಸಿ. ಉಮಾಪತಿ, ಅಂದನೂರು ಬಳಗದ ಅಧ್ಯಕ್ಷ ಅಂದನೂರು ಬಾಬಣ್ಣ ಉಪಸ್ಥಿತರಿದ್ದರು.

## ವಿಸರ್ಜನೆಯತ್ತ ಹಾಂಕಾಂಗ್‌ನ ದೊಡ್ಡ ಪ್ರಜಾಪ್ರಭುತ್ವ ಪರ ಪಕ್ಷ

ಹಾಂಕಾಗ್, ಏ. 13 - ಹಾಂಕಾಂಗ್‌ನ ಅತಿದೊಡ್ಡ ಪ್ರಜಾಪ್ರಭುತ್ವಪರ ಪಕ್ಷವಾದ ಡೆಮೋಕ್ರಟಿಕ್ ಪಾರ್ಟಿಯು ವಿಸರ್ಜನೆಯತ್ತ ಹೆಜ್ಜೆ ಇಟ್ಟಿದೆ. ಚೀನಾದಲ್ಲಿ ರಾಜಕೀಯ ಸ್ವಾತಂತ್ರ್ಯ ಕ್ಷೀಣಿಸುತ್ತಿರುವ ನಡುವೆ ಈ ಬೆಳವಣಿಗೆ ಗಮನಾರ್ಹವಾಗಿದೆ.

ಪಕ್ಷದ ಶೇ. 90ರಷ್ಟು ಸದಸ್ಯರು ಪಕ್ಷವನ್ನು ವಿಸರ್ಜಿಸಬೇಕೆಂದು ತೀರ್ಮಾನಿಸಿದ್ದು, ಈಗಾಗಲೇ ವಿಸರ್ಜನೆಯ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ ಎಂದು ಪಕ್ಷದ ಅಧ್ಯಕ್ಷ ಲೋ ಕಿನ್-ಹೀ ತಿಳಿಸಿದ್ದಾರೆ.

ಮುಂಬರುವ ತಿಂಗಳುಗಳಲ್ಲಿ ಅಂತಿಮ ಮತದಾನ ನಡೆಯಲಿದ್ದು, ಗಣನೀಯ ಬದಲಾವಣೆಗಳಾಗದಿದ್ದರೆ ಪಕ್ಷದ ವಿಸರ್ಜನೆಯ ಮಾರ್ಗವು ಸ್ಪಷ್ಟವಾಗಿದೆ ಎಂದು ಅವರು ಹೇಳಿದ್ದಾರೆ.

ಬ್ರಿಟಿಷರ ಆಡಳಿತದಲ್ಲಿದ್ದ ಹಾಂಕಾಂಗ್ 1997ರಲ್ಲಿ ಚೀನಾದ ಆಡಳಿತಕ್ಕೆ ಸೇರಿತ್ತು. ಅಂದಿನಿಂದ ಪ್ರಜಾಪ್ರಭುತ್ವಕ್ಕೆ ಇದ್ದ ಅವಕಾಶಗಳು ಕ್ರಮೇಣ ಕಡಿಮೆಯಾಗುತ್ತಿವೆ.

ಪ್ರಸ್ತುತ ರಾಜಕೀಯ ಪರಿಸ್ಥಿತಿ ಮತ್ತು ಸಾಮಾಜಿಕ ವಾತಾವರಣವನ್ನು ಪರಿಗಣಿಸಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಲೋ ಕಿನ್-ಹೀ ಹೇಳಿದ್ದಾರೆ. ಪಕ್ಷವನ್ನು ಮುಂದುವರಿಸಿದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುವುದೆಂದು ಕೆಲವು ಸದಸ್ಯರು ಎಚ್ಚರಿಕೆ ನೀಡಿದ್ದರು.

## ವಿಕಾಸ ತರಂಗಿಣಿಯಿಂದ ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ವಿಕಾಸ ತರಂಗಿಣಿ ವತಿಯಿಂದ 30ನೇ ವರ್ಷದ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮವು ಮಹಾನಗರ ಪಾಲಿಕೆ ಮುಂಭಾಗದಲ್ಲಿ ನಡೆಯುತ್ತಿದ್ದು, ದಿ. ಕೆ.ಎಸ್. ಪ್ರಭಾಕರ್ ರಾವ್ ಮತ್ತು ದಿ. ಕೆ.ಜಿ. ರಾಜೇಶ್ವರರಾವ್ ಇವರುಗಳ ಕುಟುಂಬಗದವರು ಮಜ್ಜಿಗೆ ದಾನಿಗಳಾಗಿದ್ದಾರೆ. ಮಜ್ಜಿಗೆ ದಾನಿಗಳಾಗಲಿಚ್ಚಿಸುವವರು 94483 24358 ಈ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ವಿಕಾಸ ತರಂಗಿಣಿ ಸಂಚಾಲಕ ಬಿ. ಸತ್ಯನಾರಾಯಣ ಮೂರ್ತಿ ತಿಳಿಸಿದ್ದಾರೆ.

**STAFF WANTED – BAR, RESTAURANT & LIQUOR SHOP**

We are looking for experienced professionals for the following positions:

1. **Computer Billing Staff / Computer Operators**
   - Proficient in billing software
   - Cash handling experience is a must
2. **Stewards and Waiters**
   - Only candidates with prior experience in bar & restaurant setups
3. **Kitchen Supervisors**
   - Strong kitchen management experience preferred
4. **Excise Accounts Assistants / Vendors**
   - Must have hands-on experience in writing and maintaining records for the Excise Department.

Note: Only candidates with prior experience in bar, restaurant, or liquor shop operations will be considered.

**For inquiries contact : 70191 37858, 88673 53321**

## ಕಬಡ್ಡಿ, ಕುಸ್ತಿ ಕ್ರೀಡೆ : ವಿಶೇಷ ಆಯ್ಕೆ ಶಿಬಿರ

ದಾವಣಗೆರೆ, ಏ. 13- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿಗೆ ಕ್ರೀಡಾ ವಸತಿ ಶಾಲೆ ಅಥವಾ ನಿಲಯಗಳಿಗೆ 8ನೇ ತರಗತಿ, ಪ್ರಥಮ ಪಿ.ಯು.ಸಿ. ಮಟ್ಟದ ಅರ್ಹ ಕ್ರೀಡಾಪಟುಗಳನ್ನು ಜಿಲ್ಲಾ ಹಾಗೂ ವಿಭಾಗ ಮಟ್ಟದಲ್ಲಿ ಈಗಾಗಲೇ ಆಯ್ಕೆ ಪ್ರಕ್ರಿಯೆ ನಡೆಸಲಾಗಿದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ ವಿವಿಧ ಕಾರಣಗಳಿಂದ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ನಾಡಿದ್ದು ದಿನಾಂಕ 15 ರಂದು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ವಿಶೇಷ ಆಯ್ಕೆ ಶಿಬಿರ ಆಯೋಜನೆ ಮಾಡಲಾಗಿದೆ. ಆಸಕ್ತರು ನಾಡಿದ್ದು ದಿನಾಂಕ 15 ರ ಬೆಳಿಗ್ಗೆ 9.30 ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ಕಬಡ್ಡಿ ಮತ್ತು ಕುಸ್ತಿ ಕ್ರೀಡೆಗಳ ಶೇಷ ಆಯ್ಕೆ ಶಿಬಿರದಲ್ಲಿ ಭಾಗವಹಿಸಬಹುದು. ಮಾಹಿತಿಗಾಗಿ 08192-237480ಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಅಮರಾವತಿ ಕರೂರು ಹಾಲಪ್ಪ ನಿಧನ



ಹರಿಹರ ನಗರ ಅಮರಾವತಿ ವಾಸಿ ಹನುಮಂತಪ್ಪ ಕೆ. ಬಾಪೂಜಿ ಶಾಲೆ ಶಿಕ್ಷಕರು ಹರಿಹರ ಇವರ ಪೂಜ್ಯ ತಂದೆಯವರಾದ

**ಕರೂರು ಹಾಲಪ್ಪನವರು**

ದಿನಾಂಕ : 13.04.2025ರ ಭಾನುವಾರ ಮಧ್ಯಾಹ್ನ 3.10ಕ್ಕೆ ದೈವಾಧೀನರಾಗಿರುತ್ತಾರೆ. ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಐವರು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 14.04.2025ರ ಸೋಮವಾರ ಅಮರಾವತಿಯ ರುದ್ರಭೂಮಿಯಲ್ಲಿ ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ :
ಅಮರಾವತಿ ಗ್ರಾಮಸ್ಥರು, ಕರೂರು ವಂಶಸ್ಥರು ಅಮರಾವತಿ.

## ಶ್ರೀಮತಿ ಅನಂತಮ್ಮ ನಿಧನ



ದಾವಣಗೆರೆ ನಗರದ ಮ್ಯಾಸ ಬೇಡರ ಕೇರಿ (ಎಂ.ಬಿ. ಕೇರಿ) ವಾಸಿಯಾದ ಶ್ರೀ ಚೌಡೇಶ್ವರಿ ಕೋ ಆಪರೇಟಿವ್ ಸೊಸೈಟಿಯ ನಿರ್ದೇಶಕರಾದ

**ಶ್ರೀಮತಿ ಅನಂತಮ್ಮ**

ಇವರು ದಿನಾಂಕ : 13.04.2025ರ ಭಾನುವಾರ ಸಂಜೆ 6.30 ಗಂಟೆಗೆ ನಿಧನರಾದರು. ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ದಿನಾಂಕ : 14.04.2024ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಹರಿಹರ ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. 85531 51916

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 13-04-2025ರಂದು ನಿಧನರಾದ ಶ್ರೀ ಚೌಡೇಶ್ವರಿ ಕೋ-ಆಪರೇಟಿವ್ ಸೊಸೈಟಿಯ ನಿರ್ದೇಶಕರಾದ

**ಶ್ರೀಮತಿ ಅನಂತಮ್ಮ** ಅವರಿಗೆ

ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಉಪಾಧ್ಯಕ್ಷರು,
ಕಾರ್ಯಕಾರಿ ಮಂಡಳಿ ಮತ್ತು ಸಿಬ್ಬಂದಿ ವರ್ಗ
ಶ್ರೀ ಚೌಡೇಶ್ವರಿ ಕೋ-ಆಪರೇಟಿವ್ ಸೊಸೈಟಿ, ದಾವಣಗೆರೆ.

## 5ನೇ ವರ್ಷದ ಪುಣ್ಯ ಸ್ಮರಣೆ



**ಟಿ.ಎಂ. ಮಂಜುನಾಥ**

ನೀನು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳು ಕಳೆದರೂ ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೇ ಉಳಿದಿದೆ. ನಿಮ್ಮನ್ನು ಸದಾ ಸ್ಮರಿಸುವವರು ತಂದೆ ಟಿ.ಎಂ. ಬಸವರಾಜ, ಪತ್ನಿ ಶ್ರೀಮತಿ ಟಿ.ಎಂ. ದೀಪ, ಮಗ ಟಿ.ಎಂ. ಅಭಿಷೇಕ ಹಾಗೂ ಕುಟುಂಬ ವರ್ಗದವರು ಮತ್ತು ಸ್ನೇಹಿತರು.

ಶ್ರೀಗುರು ಟೈರ್ಸ್ ಸಿಬ್ಬಂದಿ
ಪಿ.ಬಿ. ರಸ್ತೆ, ದಾವಣಗೆರೆ


## ದಾವಣಗೆರೆಯಲ್ಲಿ ಡಾ|| ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಕಟ್ಟಡಕ್ಕೆ ಶಂಕುಸ್ಥಾಪನೆ



ಕರ್ನಾಟಕ ಸರ್ಕಾರ
ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ಜಿಲ್ಲಾ ಕೇಂದ್ರದ ದಾವಣಗೆರೆ ನಗರದ ಶಿರಮಗೊಂಡನಹಳ್ಳಿ ಸರ್ವೆ ನಂ: 57 ರಲ್ಲಿ 20 ಗುಂಟೆ ನಿವೇಶನದಲ್ಲಿ ರೂ 500.00 ಲಕ್ಷಗಳ ಅಂದಾಜು ವೆಚ್ಚದಲ್ಲಿ

**ಡಾ|| ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ**
**ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ಸಮಾರಂಭ**

ದಿನಾಂಕ : 14-04-2025ರ ಸೋಮವಾರ ಸಮಯ : ಮಧ್ಯಾಹ್ನ 2.00 ಗಂಟೆಗೆ
ಸ್ಥಳ : ಪ್ರವಾಸಿ ಮಂದಿರದ (ಸರ್ಕ್ಯೂಟ್ ಹೌಸ್) ಹತ್ತಿರ

ಶಂಕುಸ್ಥಾಪನೆ : ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು

ಅಧ್ಯಕ್ಷತೆ : ಡಾ|| ಶಾಮನೂರು ಶಿವಶಂಕರಪ್ಪ, ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು : ಡಾ|| ಪ್ರಭಾ ಮಲ್ಲಿಕಾರ್ಜುನ್, ಸಂಸದರು

* ಶ್ರೀ ಕೆ.ಎಸ್.ಬಸವಂತಪ್ಪ, ಮಾಯಕೊಂಡ ಶಾಸಕರು * ಶ್ರೀ ಬಿ.ದೇವೇಂದ್ರಪ್ಪ, ಜಗಳೂರು ಶಾಸಕರು
* ಶ್ರೀ ಶಾಂತನಗೌಡ ಡಿ.ಜಿ., ಹೊನ್ನಾಳಿ ಶಾಸಕರು * ಶ್ರೀ ಬಸವರಾಜು ವಿ.ಶಿವಗಂಗಾ, ಚನ್ನಗಿರಿ ಶಾಸಕರು
* ಶ್ರೀ ಬಿ.ಪಿ ಹರೀಶ್, ಹರಿಹರ ಶಾಸಕರು

ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಚಿದಾನಂದ ಎಂ.ಗೌಡ, ಶ್ರೀ ಡಿ.ಎಸ್. ಅರುಣ್, ಶ್ರೀ ಕೆ.ಎಸ್. ನವೀನ್, ಶ್ರೀ ಕೆ. ಅಬ್ದುಲ್ ಜಬ್ಬಾರ್, ಡಾ. ಧನಂಜಯ್ ಸರ್ಜಿ, ಶ್ರೀ ಡಿ.ಟಿ. ಶ್ರೀನಿವಾಸ್, ಶ್ರೀ ಅಸಗೋಡು ಜಯಸಿಂಹ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಶ್ರೀ ಜಯದೇವನಾಯ್ಕ್, ಬಂಜಾರ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಶ್ರೀ ದಿನೇಶ್.ಕೆ.ಶೆಟ್ಟಿ, ದೂಡಾ ಅಧ್ಯಕ್ಷರು.

ಈ ಕಾರ್ಯಕ್ರಮಕ್ಕೆ ದಲಿತ ಮುಖಂಡರು, ಪ್ರಗತಿಪರ ಸಂಘಟನೆಗಳ ಮುಖಂಡರುಗಳು, ಸಮಾಜದ ಮುಖಂಡರುಗಳು ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ರವರ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಕಾಲಕ್ಕೆ ಆಗಮಿಸಿ ಸಮಾರಂಭವನ್ನು ಯಶಸ್ವಿಗೊಳಿಸಲು ಕೋರಿದೆ.

ದಾವಣಗೆರೆ ಜಿಲ್ಲಾಡಳಿತದಿಂದ ಹೃದಯ ಪೂರ್ವಕ ಸುಸ್ವಾಗತ



// ಶ್ರದ್ಧಾ // || ಶ್ರೀ ಸಾಯಿನಾಥಾಯ ನಮಃ || // ಸಬೂರಿ //

## ಶ್ರೀ ಶಿರಿಡಿ ಸಾಯಿಬಾಬಾ ಮಂದಿರ

ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.



ದಾವಣಗೆರೆಯ ಶ್ರೀ ಸಾಯಿ ಮಂದಿರದಲ್ಲಿ ಶಿರಿಡಿ ಸಂಸ್ಥಾನದ

**ಬಾಬಾ ಪಾದುಕೆ ದರ್ಶನೋತ್ಸವ**

ದಿನಾಂಕ : 14 / 15 ಏಪ್ರಿಲ್ 2025 ಸೋಮವಾರ / ಮಂಗಳವಾರ

ಸಮಯ : ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ



ಶ್ರೀ ಶಿರಿಡಿ ಸಾಯಿಬಾಬಾರವರು ತಮ್ಮ ಜೀವಿತಾವಧಿಯಲ್ಲಿ ಧರಿಸುತ್ತಿದ್ದ ಪಾದರಕ್ಷೆಗಳು

ಸರ್ವ ಭಕ್ತಾದಿಗಳಿಗೆ ಎರಡೂ ದಿನವೂ ದಾಸೋಹ ಇರುತ್ತದೆ.

ವಿ.ಸೂ. : ವಿಶೇಷ ದರ್ಶನದ ಪಾಸ್‌ಗಳಿಗಾಗಿ ಸಂಪರ್ಕಿಸಿ ಮೊ. : 70192 04202

ಸರ್ವಭಕ್ತಾದಿಗಳು ಈ ಕಾರ್ಯಕ್ರಮಕ್ಕೆ ಆಗಮಿಸಿ, 'ಪಾದುಕೆ' ದರ್ಶನ ಪಡೆದು, ಬಾಬಾರವರ ಕೃಪಾಶೀರ್ವಾದ ಪಡೆದು ಪುನೀತರಾಗಬೇಕೆಂದು ಶ್ರೀ ಸಾಯಿ ಟ್ರಸ್ಟ್ ಕೋರಿದೆ.

ಸರ್ವ ಭಕ್ತಾದಿಗಳಿಗೂ ಆದರದ ಸುಸ್ವಾಗತ

**ಶ್ರೀ ಸಾಯಿ ಟ್ರಸ್ಟ್ (ರಿ.)**

### 'ಬಾಬಾರವರ ಪಾದುಕೆ ದರ್ಶನ'ದ ಪ್ರಯುಕ್ತ ಭಜನೆ ಕಾರ್ಯಕ್ರಮ

**ದಿನಾಂಕ 14-04-2025ನೇ ಸೋಮವಾರ**

ಬೆಳಿಗ್ಗೆ 10 ರಿಂದ 12 ರವರೆಗೆ
'ಸಾಯಿ ಭಜನಾಮೃತ'
ಶ್ರೀ ಶಿರಡಿ ಸಾಯಿ ಬಾಬಾ ಭಜನಾ ಮಂಡಳಿ ಸದಸ್ಯರಿಂದ, ದಾವಣಗೆರೆ

ಸಂಜೆ 7 ರಿಂದ 9 ರವರೆಗೆ
ಶ್ರೀ ಸಾಯಿದೀಪಾ ಕಲಾ ಪ್ರತಿಷ್ಠಾನ. ವಿದ್ವಾನ್ ಶ್ರೀ ಮಹೇಂದ್ರ ಗೋರೆ, ಶಿವಮೊಗ್ಗ.

**ದಿನಾಂಕ 15-04-2025ನೇ ಮಂಗಳವಾರ**

ಬೆಳಿಗ್ಗೆ 9 ರಿಂದ 10 ರವರೆಗೆ
ಸಾಯಿಮಂದಿರ ಭಜನಾ ಮಂಡಳಿಯಿಂದ

ಬೆಳಿಗ್ಗೆ 10 ರಿಂದ 12 ರವರೆಗೆ
ಶ್ರೀ ಸತ್ಯ ಸಾಯಿ ಸೇವಾ ಸಮಿತಿ ಸದಸ್ಯರಿಂದ, ದಾವಣಗೆರೆ

ಸಂಜೆ 7 ರಿಂದ 9 ರವರೆಗೆ
ಶ್ರೀದೇವಿ ವೃಂದದ ಶ್ರೀಮತಿ ನೀತಾ ಪ್ರಭಾಕರ್ ಮತ್ತು ವೃಂದದವರಿಂದ



ಡಾ. ಶಾಮನೂರು ಶಿವಶಂಕರಪ್ಪನವರು – ಗೌರವಾನ್ವಿತ ಅಜೀವ ಚೇರ್ಮನ್
ಎಸ್.ಎಸ್. ಗಣೇಶ್ – ಕಾರ್ಯಾಧ್ಯಕ್ಷರು
ಡಾ. ಅಥಣಿ ವೀರಣ್ಣ – ಉಪಾಧ್ಯಕ್ಷರು
ಎಸ್.ಜಿ. ಅಭಿಜಿತ್ – ಟ್ರಸ್ಟಿಗಳು
ಎಂ. ಶಿವಪ್ಪ – ಕಾರ್ಯದರ್ಶಿ
ಡಾ. ಹೆಚ್.ಎಸ್. ಜಾಧವ್ – ಖಜಾಂಚಿ
ಪರಶುರಾಮ್ ಆರ್.ಡಿ. – ಟ್ರಸ್ಟಿಗಳು
ಕೆ.ಎನ್. ನಟರಾಜ್ – ಟ್ರಸ್ಟಿಗಳು
ಗಿರೀಶ್ ಹೆಚ್.ಎ. – ಟ್ರಸ್ಟಿಗಳು
ಜೀತೇಂದ್ರಕುಮಾರ್ ಬೇತೂರು – ಟ್ರಸ್ಟಿಗಳು

**ಸೇವಾಧಾರಿಗಳು**



ಉತ್ತಂಗಿ ಪ್ರಕಾಶ್ ಕುರ್ಡೇಕರ್, ಜಿ.ಎಂ ಬಸವಲಿಂಗೇಶ್ವರ, ಉತ್ತಂಗಿ ವೀರಣ್ಣ, ಶಿವಕುಮಾರ್ ಕೆ.ಹೆಚ್., ಕೆ.ಟಿ. ಮಹಾಲಿಂಗಪ್ಪ, ರಮೇಶ್ ವಿ. ಅಂಬರ್‌ಕರ್, ಮಧುಸೂಧನ್ ಎಂ.ಬಿ., ಮಧುಸೂಧನ, ಶ್ರೀನಿವಾಸ್ ಪಿ., ಬಿ. ರಾಜಶೇಖರ್, ಶಿವಕುಮಾರ್ ಡಿ.ಎಂ., ಟಾಟಾ ಶಿವನ್ ಹೆಚ್., ಎಸ್.ಜಿ. ಉಳವಯ್ಯ


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas